MOTION OF THANKS TO THE GOVERNOR'S ADDRESS.

(Debate Continued)

Sri S. R. KANTHI (Minister for Education).—Sir, I want to speak for a couple of minutes before you call upon any other member to speak because I have got some business in the Upper House today and I am divided between this House and the other House.

Mr. SPEAKER.—Then some arrangement must have been made. I am willing to accommodate, but in adjusting the work the Education Minister should have spoken yesterday or the previous day or the Hon'ble Minister ought to have made some other arrangements.

Sri S. R. KANTHI.—Yesterday one of the members made an allegation against me and it is with reference to that.

Mr. SPEAKER.—If the Minister wants arrangement for the whole day, I would suggest for some arrangement be made and somebody else can represent for him. I know that one person cannot be present simultaneously in both the Houses and so some adjustment of work has to be done. Now I have received a list of names of speakers from Sri Sivappa. Is he serious about it ?

Sri S. SIVAPPA (Sravanabelagola).—They may be given some time.

Mr. SPEAKER.—He should be. I am willing to accommodate if the House agrees. I will put it to the House and if the House agrees I have no objection.

Sri S. SIVAPPA.—Give at least one hour each for these members.

Mr. SPEAKER.—The Hon'ble Leader of Opposition could have told this to me earlier. Even now I appeal to the whips let them sit together and think coolly and come to some arrangement. Let there be some better understanding and co-ordination instead of raising these things on the floor of the House. This is the last day and I can as well put the motion to the House but let us do it very gracefully with the co-operation of all. Yesterday I had received two names of Sri L.B. Birje and Sri P. Venkatagiriyappa. Both of them are not here now. So I now call upon the Education Minister.

Sri S. R. KANTHI.—Sir, I have not much to say. One of the hon'ble members has alleged that one of my brothers was involved in a misappropriation case in a co-operative society. It is absolutely not true. I can say that my brothers have got nothing to do with co-operative societies because 3 of my brothers are medical practitioners and they are busy people and have no time for all these things. I wonder how and where my friend got this information.

Mr. SPEAKER.—Who made that allegation ?

Sri S. R. KANTHI.—Sri Muckannappa. If he proves that it is a fact, I am going to make any amends that he wants to make. It is all false allegation.

Mr. SPEAKER.—Will Sri C. J. Muckannappa say which brother ?

Sri C. J. MUCKANNAPPA (Sira).—Why do you want name ? You have said that names should not be given.

Mr. SPEAKER.—He says all his Brothers are medical men and he has no such brother.

Sri C. J. MUCKANNAPPA.—The matter is pending before a Court of Law presently. He had written for withdrawal of the case, but the court did not give permission for withdrawal.

Sri S. R. KANTHI.—It is not true. None of my brothers is involved in a criminal case and he has nothing to do with co-operative societies.

Mr. SPEAKER.—May I know in which Court it is pending ?

Sri C. J. MUCKANNAPPA.—It is pending in Hyderabad-Karnatak Court.

Mr. SPEAKER.—How can a case pertaining to a matter in Mysore State be pending in the Hyderabad Court ?

Sri C. J. MUCKANNAPPA.—If it comes to that, I am prepared to prove it.

Mr. SPEAKER.—I will leave it to the House to judge because no useful purpose will be served. The Rules of Procedure are there and it is for any member who wants to take it up.

Before we proceed futher now that the Chief Minister is here, I have received requests from two more members that they may be given chance to speak. We must draw the line some where and so I would like to know his views.

Sri S. NIJALINGAPPA (Chief Minister).—I do not think it is possible to accommodate any more members because much has been said and we cannot go on extending the time.

Mr. SPEAKER.—So, I will now call upon Sri Andanaiah and as soon as he finishes I will call upon Government to reply.

†ಶ್ರೀ ಅಂದಾನಯ್ಯ (ಕುಣಿಗಲ್).—ಮಾನ್ಯ ಸಭಾಪತಿಗಳೇ, ಈಗಾಗಲೇ ರಾಜ್ಯಪಾಲರ ಭಾಷಣದ ಮೇಲೆ ಈ ಮಾನ್ಯಸಭೆಯ ಸದಸ್ಯರನೇಕರು ಮಾತನಾಡಿದ್ದಾರೆ. ನನ್ನ ಮಾನ್ಯ ಮಿತ್ರರಾದ ಶ್ರೀ ಮುಕ್ಕಣ್ಣಪ್ಪನವರು ಮಾತನಾಡುತ್ತಾ ರಾಜ್ಯಪಾಲರ ಭಾಷಣ ನಿರ್ವೀರ್ಯವಾಗಿದೆ, ಸರ್ಕಾರದ ನೀತಿಯ ಬಗ್ಗೆ ಇದರಲ್ಲಿ ಏನೂ ಕಾಣಬರುತ್ತಿಲ್ಲವೆಂದು ಹೇಳಿದರು. ಇದು ಅಕ್ಷರಶಃ ನಿಜವೆಂದು ನಾನು ಹೇಳುತ್ತಿದ್ದೇನೆ. ರಾಜ್ಯಪಾಲರ ಭಾಷಣದಲ್ಲಿ ದೇಶದಲ್ಲಿರತಕ್ಕ ಅನೇಕ ಸಮಸ್ಯೆಗಳ ಬಗ್ಗೆ ಏನೊಂದೂ ಕಾಣುತ್ತಿಲ್ಲ. ಇವತ್ತು ನಾನ್-ಗೆಜೆಟೆಡ್ ನೌಕರರ ತುಟ್ಟಿಭತ್ಯವನ್ನು ಹೆಚ್ಚಿಸುವ ವಿಚಾರದಲ್ಲಾಗಲೀ ವಿದ್ಯಾಭ್ಯಾಸದ ಒಂದು ಮಟ್ಟವನ್ನು ಹೆಚ್ಚಿಸುವ ವಿಚಾರದಲ್ಲಾಗಲೀ ನಿರುದ್ಯೋಗ ಸಮಸ್ಯೆಯನ್ನು ನಿವಾರಣೆಮಾಡುವ ವಿಚಾರದಲ್ಲಾಗಲೀ ಯಾವ ಒಂದು ವಿಷಯವೂ ಈ ರಾಜ್ಯಪಾಲರ ಭಾಷಣದಲ್ಲಿ ಏನೂ ಕಾಣಬರುತ್ತಾ ಇಲ್ಲ.

ಸ್ವಾಮಿ, ಮೊದಲನೆಯದಾಗಿ ಆಹಾರ ಸಮಸ್ಯೆ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ನಮ್ಮ ದೇಶದಿಂದ ಹೊರದೇಶಗಳಿಗೆ ಹೋಗುವ ಆಹಾರ ಪದಾರ್ಥಗಳನ್ನು ತಡೆಗಟ್ಟಿ ನಮ್ಮ ಭಾಗಗಳಿಂದ ಸ್ಮಗಲ್ಲಾಗಿ ಹೋಗುವುದನ್ನು ತಪ್ಪಿಸಲು ಚೆಕ್ ಪೋಸ್ಟ್‌ಗಳನ್ನು ಮಾಡಿದ್ದಾರೆಂದು ಹೇಳಿದ್ದಾರೆ. ಒಂದು ಕಡೆ ಮಹಾರಾಷ್ಟ್ರ, ಇನ್ನೊಂದು ಕಡೆ ಕೇರಳದೇಶಕ್ಕೆ ನಮ್ಮ ದೇಶದಿಂದ ಆಹಾರ ಪದಾರ್ಥಗಳು ಹೋಗುತ್ತವೆ. ಆದ್ದರಿಂದ ನಮ್ಮ ದೇಶದಲ್ಲಿ ಆಹಾರ ಅಭಾವ ಆಗಲಿಕ್ಕೆ ಇದು ಒಂದು ಕಾರಣವೆಂಬುದಾಗಿ ಮಾನ್ಯ ರೆವಿನ್ಯೂ ಮಂತ್ರಿಗಳೇ ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಆದರೆ ಇವರ ಚೆಕ್ ಪೋಸ್ಟ್ಸ್ ಏನು ಕೆಲಸ ಮಾಡುತ್ತಿವೆ ಎಂಬುದನ್ನು ಈಗ ವಿಚಾರ ಮಾಡೋಣ. ಇವತ್ತು ಈ ಮೇಲ್ವಿಚಾರಣೆಗಾಗಿ ಅನೇಕ ಅಧಿಕಾರಿಗಳು ಇದ್ದಾರೆ. ಡೈರೆಕ್ಟರ್ ಆಫ್ ಫುಡ್ ಸಪ್ಲೈಸ್ ಒಬ್ಬರು ಅವರ ಜೊತೆಗೆ ಜಾಯಿಂಟ್ ಡೈರೆಕ್ಟರ್ಸ್, ಅವರ ಜೊತೆಗೆ ಅಸಿಸ್ಟೆಂಟ್ ಕಮಿಷನರ್ಸ್ ಆಮೇಲೆ ತಹಸೀಲುದಾರುಗಳು ರೆವಿನ್ಯೂ ಇನ್ಸ್‌ಪೆಕ್ಟರುಗಳು ಹೀಗೆ ಇಷ್ಟೊಂದು ಜನ ಅಧಿಕಾರಿಗಳು ಇದ್ದರೂ ನಮ್ಮ ದೇಶದಲ್ಲಿನ ಆಹಾರ ಕಳ್ಳಸಂತೆಯಲ್ಲಿ ಹೊರಟು ಹೋಗುತ್ತಲೇ ಇದೆ. ಈ ಇಲಾಖೆಗಳು ಏನು ಕೆಲಸ ಮಾಡುತ್ತಿವೆ ಎಷ್ಟು ಸಹಾಯ ಮಾಡುತ್ತಿವೆ, ಇವುಗಳಿಂದ ದೇಶಕ್ಕೆ ಎಷ್ಟು ನಷ್ಟವಾಗುತ್ತಿದೆ ಎಂಬುದನ್ನು ಸರ್ಕಾರದವರು ನಿಜವಾಗಿ

(ಶ್ರೀ ಅಂದಾನಯ್ಯ)

ಯೋಚನೆ ಮಾಡುತ್ತಾರೆಯೇ ಎಂದು ನಾನು ಕೇಳುತ್ತೇನೆ. ಇದಲ್ಲದೆ, ನಮ್ಮ ದೇಶದಲ್ಲಿ ಇಷ್ಟು ಆಹಾರ ಅಭಾವ ಜಾಸ್ತಿಯಾಗಲು ದೇಶದ ಉತ್ಪಾದನೆ ಬಹಳ ಕಮ್ಮಿ. ಅದೂ ಒಂದು ಕಾರಣ ವಾಗಿದೆ. ಆಹಾರೋತ್ಪಾದನೆಯ ವಿಚಾರದಲ್ಲಿ ಸರ್ಕಾರ ಬಹಳ ಹಿಂಜರಿಯುತ್ತಿದೆ. ವ್ಯವಸಾಯ ಗಾರನಿಗೆ ಏನೊಂದು ಸೌಲಭ್ಯವನ್ನು ಸರ್ಕಾರದವರು ಒದಗಿಸುತ್ತಾ ಇಲ್ಲವೆಂದು ಈ ಸಭೆಯ ಸದಸ್ಯ ರನೇಕರು ಪದೇ ಪದೇ ಈ ಸಭೆಯಲ್ಲಿ ಹೇಳುತ್ತಿದ್ದಾರೆ. ಕಾಲಕ್ಕೆ ಸರಿಯಾಗಿ ರೈತರಿಗೆ ತಾಂತ್ರಿಕ ವ್ಯವಸಾಯ ಮುಟ್ಟುಗಳನ್ನು ಒದಗಿಸಬೇಕು. ಸಣ್ಣ ಸಣ್ಣ ಟ್ರಾಕ್ಟರುಗಳನ್ನು ತಂದು ಕೊಡಬೇಕೆಂದು ಎಷ್ಟೋಸಾರಿ ಇಲ್ಲಿ ಕೆಲವು ಸದಸ್ಯರು ಹೇಳಿದ್ದಾರೆ. ಜಪಾನ್ ದೇಶದಲ್ಲಿ ಇವತ್ತು ಎರಡು ಮೂರು ಸಾವಿರ ರೂಪಾಯಿಗಳಲ್ಲಿ ಸಣ್ಣ ಸಣ್ಣ ಟ್ರಾಕ್ಟರುಗಳು ತಯಾರಾಗುತ್ತಿವೆ. ಅವನ್ನು ತರಿಸಿ ಕೊಡಿ ಎಂದು ಹೇಳಿದರೂ ಸರ್ಕಾರ ಇದನ್ನು ಗಮನಕ್ಕೇ ತೆಗೆದುಕೊಂಡಿಲ್ಲ. ಇದು ನಿಜವಾಗಿ ಬಹಳ ವಿಷಾದಕರ. ಇವತ್ತು ದೇಶದಲ್ಲಿ ಅನ್ನ ಒದಗಿಸುವ ರೈತನಿಗೆ ದೇಶದಲ್ಲಿ ಕೋಲಾಹಲವೆದ್ದಾಗ ಅವನಿಗೆ ಬೇಕಾದ ಸಲಕರಣೆಗಳನ್ನು ಬಿತ್ತನೆಬೀಜಗಳನ್ನು ಗೊಬ್ಬರ ಮುಂತಾದುವುಗಳನ್ನು ಕೊಳ್ಳಲು ಸರ್ಕಾರದವರು ಅವನಿಗೆ ಹಣ ಸಹಾಯವನ್ನು ಮಾಡುತ್ತಿಲ್ಲ. ಆದರೆ ಯಾವನಾದರೂ ಬಂಡವಾಳಷಾಹಿ ಮುಂದೆ ಬಂದು ಟೂರಿಸ್ಟ್ ಹೋಟಲ್ ತೆರೆಯುತ್ತೇನೆ ಒಂದು ಕೈಗಾರಿಕೆಯನ್ನು ಪ್ರಾರಂಭ ಮಾಡುತ್ತೇನೆ, ಎಂದರೆ ಲಕ್ಷಗಟ್ಟಲೆ ಹಣವನ್ನು ಕಡಿಮೆಬಡ್ಡಿಯಲ್ಲಿ ಸರ್ಕಾರದವರು ಕೊಡುತ್ತಾರೆ. ದೇಶದಲ್ಲಿ ಆಹಾರ ಕೊರತೆ ಇದ್ದಾಗ ಅದರಲ್ಲೂ ಆಹಾರ ಹೆಚ್ಚು ಉತ್ಪಾದನೆ ಮಾಡಲು ಬರುವ ರೈತರಿಗೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸುತ್ತಾ ಇಲ್ಲ. ಹಳೆಯ ಮೈಸೂರಿನ ಭಾಗದಲ್ಲಿ ಸಣ್ಣ ಸಣ್ಣ ಕೆರೆಗಳನ್ನು ಕಟ್ಟಲು ಹೆಚ್ಚಿನ ಸೌಲಭ್ಯವಿದೆ. ದೇಶದಲ್ಲಿ ಚೀಫ್ ಇಂಜನಿಯರುಗಳಾಗಿರು ವವರು ಏನೊಂದು ನೀತಿಯನ್ನು ಈಗ ಅನುಸರಿಸುತ್ತಿದ್ದಾರೋ ಅದನ್ನು ತಪ್ಪಿಸಬೇಕು. ರೈತರಿಗೆ ಅನುಕೂಲ ಮಾಡುವುದಕ್ಕೆ ಒಂದು ಹೊಸ ಮಾರ್ಗವನ್ನು ಅನುಸರಿಸಿದರೆ ಒಳ್ಳೆಯದು. ಅನೇಕ ಕೆರೆಗಳ ಕೆಲಸ ಅಪೂರ್ಣವಾಗಿವೆ. ಏಕೆಂದರೆ ಮಾಡಿದ ಎಸ್ಟಿಮೇಟುಗಳನ್ನೆಲ್ಲಾ ವಾಪಸ್ಸು ಕಳುಹಿಸುತ್ತಿರುತಾರೆ. ಇದು ಎಂತಹ ಅನ್ಯಾಯವೆಂದು ನಾನು ಕೇಳುತ್ತೇನೆ. ಹಳೆಯ ಮೈಸೂರಿನಲ್ಲಿ ಮಿಡಿಯಂ ಪ್ರಾಜೆಕ್ಟ್ ಮತ್ತು ಮೇಜರ್ ಪ್ರಾಜೆಕ್ಟುಗಳನ್ನು ಕಟ್ಟುವುದಕ್ಕೇ ಅವಕಾಶವಿಲ್ಲ. ಇಂತಹ ಸಂದರ್ಭದಲ್ಲಿ ಚೀಫ್ ಇಂಜನಿಯರ್ ನೀತಿ ಬದಲಾವಣೆ ರೈತನಿಗೆ ತನ್ನ ವ್ಯವಸಾಯಾಭಿವೃದ್ಧಿಗೆ ಒಂದು ಹೆಜ್ಜೆಯಾಗುತ್ತದೆ. ಇಲ್ಲದಿದ್ದರೆ ರೈತರಿಗೆ ಆಹಾರೋತ್ಪತ್ತಿಗೆ ತುಂಬಾ ತೊಂದರೆ ಬರುತ್ತದೆ. ರೈತನಿಗೆ ಪಂಪುಸೆಟ್ಟುಗಳು ಬೇಕೆಂದರೆ ಕೊಡುತ್ತಿಲ್ಲ. ಅವನ್ನು ಕೊಂಡುಕೊಳ್ಳುವುದಕ್ಕೆ ಹಣಬೇಕೆಂದರೆ ಅದನ್ನೂ ಸಹ ಸರ್ಕಾರ ಕೊಡುವುದಕ್ಕಾಗುವುದಿಲ್ಲ. ಹೀಗಿದ್ದರೆ ಇನ್ನೂ ದೇಶದಲ್ಲಿರತಕ್ಕ ಆಹಾರ ಕೊರತೆಯನ್ನು ನೀಗಿಸುವುದಕ್ಕೆ ಹೇಗೆ ಸಾಧ್ಯ? ರೈತನಿಗೆ ಬೇಕಾದ ಸೌಲಭ್ಯಗಳನ್ನು ಸರ್ಕಾರ ಕೊಡದೇ ಹೋದರೆ ಈಗಿರತಕ್ಕ ಆಹಾರ ಅಭಾವವನ್ನು ತಪ್ಪಿಸುವುದಕ್ಕೆ ಇನ್ನು 10-20 ವರ್ಷಗಳಾದರೂ ಸಾಧ್ಯವಾಗುವುದಿಲ್ಲ.

ಇನ್ನು ಆಡಳಿತ ಸುಧಾರಣೆಯ ವಿಷಯ. ಇವತ್ತು ದೇಶದ ಆಡಳಿತದಲ್ಲಿ ಒಂದು ದಕ್ಷತೆ ಇಲ್ಲ. ಇವತ್ತು ಹೊಸದಾಗಿ ಒಂದು ನೇಮಕ ಮಾಡುವುದೇನಾದರೂ ಇದ್ದರೆ ಅದು ಜಾತೀಯ ಆಧಾರದ ಮೇಲೆ ನಡೆಯುತ್ತದೆ. ಯಾವ ಜಾತಿಗೆ ಪ್ರೊಮೋಷನ್ ಕೊಡಬೇಕು, ಕೀ ಪೋಸ್ಟ್‌ಗಳಲ್ಲಿ ಯಾರು ಇದ್ದರೆ ಸರ್ಕಾರದ ಗುಟ್ಟನ್ನು ಹೊರಗೆಡಹುದಿಲ್ಲವೆಂಬುದನ್ನು ತಿಳಿದುಕೊಂಡು ನೇಮಕಗಳನ್ನು ಮಾಡುತ್ತಿದ್ದಾರೆ. ಬೇರೆಯವರನ್ನು ನೇಮಿಸಿದರೆ ಸರ್ಕಾರದ ಗುಟ್ಟನ್ನು ಹೊರಗಡೆಹುತ್ತಾರೆಂಬ ಮನೋಭಾವ ಇತ್ತೀಚೆಗೆ ಬಹಳ ಜಾಸ್ತಿಯಾಗಿದೆ. ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ತಯಾರು ಮಾಡುವುದಕ್ಕೆ ಸರ್ಕಾರಕ್ಕೆ ಅಷ್ಟಾಗಿ ತಾಕತ್ತೂ ಇಲ್ಲ. ಆದಕ್ಕಾಗಿ ಇವತ್ತು ಸರ್ಕಾರ ಮುಂದೆ ಬಂದಿಲ್ಲ. ಇದರಿಂದ ಸರ್ಕಾರದ ಅಧಿಕಾರಿಗಳಿಗೆ ಹೆಚ್ಚಿನ ತೊಂದರೆ ಯಾಗಿದೆ. ಇನ್ನು ತುಮಕೂರು ಜಿಲ್ಲೆಯಲ್ಲಿ ಒಂದು ವರ್ಷದೊಳಗೆ 6-9 ತಿಂಗಳು ಕಾಲ ಸರ್ವಿಸ್ ಮಾಡಿದಂಥ ಮುಖ್ಯಾಧಿಕಾರಿಗಳನ್ನು ಬೇರೆ ಕಡೆಗೆ ವರ್ಗಾವಣೆ ಮಾಡಿದ್ದಾರೆ. ಏತಕ್ಕೋಸ್ಕರ ಆ ರೀತಿ ಮಾಡಿದರೋ ಗೊತ್ತಾಗಲಿಲ್ಲ. ಇದು ಕಾನೂನು ಮಂತ್ರಿಗಳ ಕೈವಾಡವೋ ಅಥವಾ ತುಮಕೂರು ಜಿಲ್ಲೆಯಲ್ಲಿ ಅವರಿಗೆ ಬೇಕಾದಂತಹವರನ್ನು ಇಟ್ಟುಕೊಳ್ಳಬೇಕೆಂತಲೋ ಏನೋ ಗೊತ್ತಾಗಲಿಲ್ಲ. ಸುಮಾರು ಒಂದು ವರ್ಷದೊಳಗೆ 6-7 ಜನ ಅಧಿಕಾರಿಗಳು ವರ್ಗವಾಗಿರುವುದನ್ನು ನೋಡಿದರೆ ಏನು ಅನ್ಯಾಯ ಮಾಡಿದ್ದಾರೆಂಬುದು ಗೊತ್ತಾಗುತ್ತದೆ. ಈ ಅಧಿಕಾರಿಗಳು ಒಂದು ಊರಿನಿಂದ ಇನ್ನೊಂದು ಊರಿಗೆ ತಮ್ಮ ಹೆಂಡತಿ, ಮಕ್ಕಳನ್ನು ಕಟ್ಟಿಕೊಂಡು ಅಲೆದಾಡುತ್ತಿದ್ದಾರೆ. ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿದೆ. ಆದರೆ ಅಧಿಕಾರಿಗಳನ್ನು 2-3 ವರ್ಷಗಳ ಕಾಲ ಎಲ್ಲಿಗೂ ವರ್ಗಾವಣೆ ಮಾಡುವುದಿಲ್ಲವೆಂಬ ತತ್ವವನ್ನು ಅಲ್ಲಲ್ಲಿ ಭಾಷಣದಲ್ಲಿ ಹೇಳುವಾಗ ಈಗ ಈ

ಅಧಿಕಾರಿಗಳನ್ನು ಇಷ್ಟು ಅಲ್ಪಾವಧಿಯೊಳಗೆ ವರ್ಗ ಮಾಡಿರುವುದರಿಂದ ಇವರ ನೀತಿ ಏನಾಯಿತು ಎಂಬುದಾಗಿ ನಾನು ಪ್ರಶ್ನೆ ಮಾಡುತ್ತೇನೆ. ಇವರಿಗೆ ಒಬ್ಬರಿಗೆ ಒಂದು ನೀತಿ, ಇನ್ನೊಬ್ಬರಿಗೆ ಒಂದು ನೀತಿ ಅನ್ವಯಿಸುವ ಹವ್ಯಾಸವಿದ್ದ ಹಾಗೆ ಕಾಣುತ್ತಿದೆ. ಇದರಿಂದ ನಿಜವಾಗಿ ಜನರಿಗೆ ಏನೊಂದು ನಂಬಿಕೆ, ವಿಶ್ವಾಸ ಸರ್ಕಾರದಲ್ಲಿದೆಯೋ ಅದು ಹೊರಟು ಹೋಗುತ್ತದೆಂದು ನಾನು ಹೇಳುತ್ತೇನೆ.

ಇನ್ನು ನಾನ್‌ಗೆಜೆಟೆಡ್' ಆಫೀಸರುಗಳಿಗೆ ತುಟ್ಟಿಭತ್ಯ ಜಾಸ್ತಿ ಮಾಡಬೇಕೆಂಬುದಾಗಿ ಸುಮಾರು 2 ಲಕ್ಷ ನೌಕರರು ಕೇಳಿಕೊಳ್ಳುತ್ತಿರುವಾಗ ಮಾನ್ಯ ಹಣಕಾಸಿನ ಸಚಿವರು ಈಗಾಗಲೇ 2–3 ಸಾರಿ ತುಟ್ಟಿಭತ್ಯ ಅವರಿಗೆ ಜಾಸ್ತಿ ಮಾಡಿದ್ದೇವೆ. ಅದಕ್ಕಿಂತಲೂ ಹೆಚ್ಚಿಗೆ ಮಾಡುವುದಕ್ಕಾಗುವುದಿಲ್ಲ. ನಮ್ಮಲ್ಲಿ ಹಣವಿಲ್ಲವೆಂದು ಹೇಳುತ್ತಿದ್ದಾರೆ. ಇವತ್ತು ಮಾನವನ ಜೀವನಕ್ಕೆ ಅಗತ್ಯವಾದ ವಸ್ತುಗಳ ಬೆಲೆ ದಿನೇ ದಿನೇ ಏರುತ್ತಿದೆ. ಹೀಗಿರುವಾಗ ಬಡ ನೌಕರರು ಅಂತಹ ವಸ್ತುಗಳನ್ನು ಕೊಂಡು ಕೊಳ್ಳಲು ಹೇಗೆ ಸಾಧ್ಯವೆಂಬುದನ್ನು ಸರ್ಕಾರ ಯೋಚನೆ ಮಾಡಬೇಕು. ಕೇವಲ 70-80 ರೂಪಾಯಿಗಳ ಸಂಬಳ ಬರುವ ನೌಕರರು ಬೆಂಗಳೂರು ಪಟ್ಟಣದಲ್ಲಿ ಜೀವನ ಮಾಡುವ ಬಗೆ ಹೇಗೆ ? ತುಟ್ಟಿ ಭತ್ಯ ಇವರು ಕೊಟ್ಟಿರುವ ನೀತಿ ಹೇಗಿದೆ ಎಂದರೆ ಸಾಯುತ್ತಿರುವವನ ಬಾಯಿಗೆ ಒಂದು ತೊಟ್ಟು ನೀರು ಬಿಟ್ಟ ಹಾಗೆ ಆಗಿದೆ. ಮೊನ್ನೆ ವರ್ತಮಾನ ಪತ್ರಿಕೆಯಲ್ಲಿ ಒಂದು ಅಂಶವನ್ನು ಕಂಡೆ. ಅದೇನೆಂದರೆ, ಬಿಹಾರ್‌ನಲ್ಲಿ ಸರ್ಕಾರದವರೇ ಪೋಲೀಸ್ ನಾಯಿಗೆ ಮೇಂಟನೆನ್ಸ್‌ಗಾಗಿ ಹಿಂದೆ ಕೊಡುತ್ತಿದ್ದಂಥ 60 ರೂಪಾಯಿಗಳನ್ನು ಈಗ 90 ರೂಪಾಯಿಗಳಿಗೆ ಹೆಚ್ಚಿಸಿದ್ದಾರಂತೆ. ಅಂದ ಮೇಲೆ ಒಬ್ಬ ಬಡ ನೌಕರನಿಗೆ ಸುಮಾರು 10–12 ಜನ ಮಕ್ಕಳು ಇದ್ದರೆ, ಅವನಿಗೆ ಇವರು ಕೊಡ ತಕ್ಕ 70-80 ರೂಪಾಯಿಗಳ ಸಂಬಳದಲ್ಲಿ ಇನ್ನೆಷ್ಟರ ಮಟ್ಟಿಗೆ ಆತ ತನ್ನ ಸಂಸಾರವನ್ನು ತೂಗಿಸ ಬಲ್ಲನೆಂಬುದನ್ನು ಸರ್ಕಾರ ಯೋಚನೆ ಮಾಡಬೇಕು. ಇದು ಸರ್ಕಾರದ ನೀತಿಯೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಆದ್ದರಿಂದ ಹಣಕಾಸಿನ ಸಚಿವರು ಕೂಲಂಕಷವಾಗಿ ಇದನ್ನು ಯೋಚನೆಮಾಡಿ ಬಡನೌಕರನ ಕಷ್ಟವೇನಿದೆಯೋ ಅದನ್ನು ಕೂಡಲೇ ಪಾರುಮಾಡಬೇಕು. ಅವರಿಗೆ ಆದಷ್ಟು ಜಾಗ್ರತೆ ಯಾಗಿ ಅನುಕೂಲಗಳನ್ನು ಮಾಡಿಕೊಡಬೇಕು ಎಂಬುದಾಗಿ ನಾನು ಸರ್ಕಾರದವರಲ್ಲಿ ಮನವಿ ಮಾಡುತ್ತೇನೆ.

ಇನ್ನು ವಿದ್ಯಾಭ್ಯಾಸದ ಇಲಾಖೆಯ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸು ತ್ತೇನೆ. ನಮ್ಮ ದೇಶದಲ್ಲಿ ಅವಿದ್ಯಾವಂತರ ಜನಸಂಖ್ಯೆ ಜಾಸ್ತಿ ಇದೆ. ರಾಜ್ಯಪಾಲರ ಭಾಷಣದಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿದ್ದೇವೆ, ಕೆಲವು ಹೈಸ್ಕೂಲುಗಳಲ್ಲಿ 11ನೇ ತರಗತಿಗಳನ್ನು ಜಾರಿಗೆ ತಂದಿದ್ದೇವೆ ಎಂದು ಹೇಳಿದ್ದಾರೆ. ಇವತ್ತು ವಿದ್ಯಾಕ್ಷೇತ್ರದಲ್ಲಿ ಈ ಸ್ಟಾಂಡರ್ಡನ್ನು ಇಂಟ್ರಡ್ಯೂಸ್ ಮಾಡಿರುವುದನ್ನು ನೋಡಿದರೆ ಒಂದುಕಡೆ ಸ್ಥಳಾವಕಾಶವಿಲ್ಲ, ಲ್ಯಾಬೊರೇಟರಿ ಎಕ್ವಿಪ್‌ಮೆಂಟ್ಸ್ ಇಲ್ಲ, ನುರಿತಂಥ ಉಪಾಧ್ಯಾಯರುಗಳು ಸಿಕ್ಕುತ್ತಾ ಇಲ್ಲ. ಅಂತಹಕಡೆ 11ನೇ ತರಗತಿಯನ್ನು ಇಂಟ್ರ ಡ್ಯೂಸ್‌ಮಾಡಿ ಪರೀಕ್ಷೆಗಳನ್ನು ಮಾಡುವ ತರಹವನ್ನು ನೋಡಿದರೆ ಏತಕ್ಕೆ ಇಂತಹ ಕಾನೂನುಗಳನ್ನು ಮಾಡುತ್ತಾರೋ ನನಗಂತೂ ಅರ್ಥವಾಗುತ್ತಿಲ್ಲ. ಈ ಕಾನೂನುಗಳನ್ನು ಮಾಡುವಾಗ ಮುಂಚೆಯೇ ಯೋಚನೆಮಾಡಿ ಅವು ಫಲಪ್ರದವಾಗಿ ಮಾಡುವಂತೆ ರಚನೆ ಮಾಡುವುದು ಸರ್ಕಾರದ ಕರ್ತವ್ಯವಾಗಿದೆ. ಒಟ್ಟಿನಲ್ಲಿ ಇವತ್ತು ವಿದ್ಯಾ ಇಲಾಖೆಯಲ್ಲಿ ವಿದ್ಯಾರ್ಥಿಗಳ ಮಟ್ಟ ಬಹಳ ಕಡಿಮೆಯಾಗುತ್ತಿದೆ.

ಅವರು ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗತಕ್ಕ ಸಂಖ್ಯೆಯನ್ನು ನೋಡಿದರೆ, ಯಾವ ಮಟ್ಟದಲ್ಲಿ ಇವೊತ್ತು ವಿದ್ಯಾಭ್ಯಾಸ ನಡೆಯುತ್ತಿದೆ ಎಂಬುದು ಗೊತ್ತಾಗುತ್ತದೆ. ಸ್ವಾಮಿ, ದೇಶದಲ್ಲಿ ಇವೊತ್ತು ನಿರುದ್ಯೋಗ ಸಮಸ್ಯೆ ಜಾಸ್ತಿಯಾಗಿ ಜನ ಬೀದಿ ಬೀದಿಯಲ್ಲಿ ಅಲೆಯುತ್ತಿದ್ದಾರೆ. ಈ ನಿರುದ್ಯೋಗ ಸಮಸ್ಯೆಯನ್ನು ತಡೆಗಟ್ಟುವುದಕ್ಕೆ ಸರ್ಕಾರದವರು ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ ದೇಶದಲ್ಲಿ ದೊಡ್ಡ ದೊಡ್ಡ ಹಾಗೂ ಸಣ್ಣ ಸಣ್ಣ ಕೈಗಾರಿಕೆಗಳನ್ನು ತೆರೆಯುವ ಕಾರ್ಯಕ್ರಮವನ್ನು ನಾವು ರಾಜ್ಯಪಾಲರ ಭಾಷಣದಲ್ಲಿ ನೋಡಲಿಲ್ಲ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಗಮನ ಕೊಟ್ಟು ದೇಶದಲ್ಲಿ ನಿರುದ್ಯೋಗ ಸಮಸ್ಯೆಯನ್ನು ತಡೆಗಟ್ಟಲು ಒಂದು ಸರಿಯಾದಂತಹ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈಗ ಸುಮಾರು ನಾಲ್ಕೈದು ದಿವಸಗಳಿಂದಲೂ ಈ ಸಭೆಯಲ್ಲಿ ನಡೆದಂತಹ ಚರ್ಚೆಯಲ್ಲಿ ಬಹಳ ಪ್ರಾಧಾನ್ಯವಾದ ಮತ್ತು ಅತಿ ಜರೂರಾದ ಆಹಾರ ಪರಿಸ್ಥಿತಿಯ ವಿಚಾರವನ್ನು ಹೇಳಿದ್ದಾರೆ. ಎಲ್ಲಾ ಮಾನ್ಯ ಸದಸ್ಯರೂ ಕೂಡ ಪ್ರಾರಂಭದಿಂದ ಹಿಡಿದು ಕಡೆಯವರೆಗೂ ಶ್ರೀಮಾನ್ ಅಂದಾನಯ್ಯ ನವರೂ ಕೂಡ ಅನ್ನದ ವಿಷಯವನ್ನು ಮಾತನಾಡಿದ್ದಾರೆ. ಇವೊತ್ತು ನಮ್ಮ ದೇಶದಲ್ಲಿ ಆಹಾರದ ಪರಿಸ್ಥಿತಿ ಒಂದು ಕಠಿಣವಾದ ಪ್ರಶ್ನೆಯಾಗಿದೆ. ಆದ್ದರಿಂದ ಪ್ರತಿಯೊಬ್ಬ ಮಾನ್ಯ ಸದಸ್ಯರೂ ಕೂಡ

(ಶ್ರೀ ಎಂ. ವಿ. ಕೃಷ್ಣಪ್ಪ)

ಈ ವಿಷಯವನ್ನು ಮಾತನಾಡಿದ್ದಾರೆ. ನಾವೂ ಕೂಡ ಅವಿಶ್ವಾಸ ನಿರ್ಣಯ ಬಂದಾಗ ಮತ್ತು ಮಧ್ಯೆ ಮಧ್ಯೆ ಪ್ರವೇಶ ಮಾಡಿ ಆಗಾಗ್ಗೆ ಈ ಆಹಾರದ ವಿಷಯದಲ್ಲಿ ಕೆಲವು ವಿಷಯಗಳನ್ನು ಹೇಳಿದ್ದೇವೆ. ಆ ಎಲ್ಲಾ ವಿಷಯಗಳನ್ನೂ ಸೇರಿಸಿದರೆ ಬಹುಶಃ ನಾವು ಇದುವರೆವಿಗೂ ಹೇಳಿರುವ ಉತ್ತರಗಳನ್ನೇ ಮತ್ತೊಮ್ಮೆ ಹೇಳಬೇಕಾಗಿದೆ. ಇದನ್ನು ನೋಡಿದರೆ, ಈಗ ನಾವು ಉತ್ತರ ಕೊಡಬೇಕಾದ ಪ್ರಮೇಯವೇ ಇಲ್ಲ ಎಂದು ನನಗನ್ನಿಸುತ್ತದೆ. ಅದೂ ಅಲ್ಲದೆ ಈ ಆಹಾರದ ವಿಷಯದಲ್ಲಿ ನಾನು ಹೆಚ್ಚಿಗೆ ಮಾತನಾಡದೇ ಇರುವುದೇ ಒಳ್ಳೆಯದು ಎಂದು ನನಗನ್ನಿಸುತ್ತದೆ. ಈ ಆಹಾರದ ವಿಚಾರದಲ್ಲಿ ಮಂತ್ರಿಗಳು ಪತ್ರಿಕೆಗಳಲ್ಲಿ ಸ್ಟೇಟ್‌ಮೆಂಟ್ ಕೊಡುತ್ತಾರೆ ಎಂದು ಕೆಲವರು ಅಪಪ್ರಚಾರ ಮಾಡುತ್ತಿದ್ದಾರೆ. ಈ ವಿಷಯದಲ್ಲಿ ಬೇಕಾದರೆ ಪತ್ರಿಕಾ ಪ್ರತಿನಿಧಿಗಳನ್ನೇ ಕೇಳಿ, ಒಂದು ದಿವಸವೂ ನಾನು ಪ್ರೆಸ್ ಕಾನ್ಫರೆನ್ಸ್ ಕರೆದು ಆಹಾರದ ವಿಷಯದಲ್ಲಿ ಅವರಿಗೆ ಸ್ಟೇಟ್‌ಮೆಂಟ್ ಕೊಟ್ಟಿಲ್ಲ. ಇಂಥಾ ಒಂದು ಪರಿಸ್ಥಿತಿಯಲ್ಲಿ ನಾನು ಈ ಸಭೆಯ ಮಾನ್ಯ ಸದಸ್ಯರ ಗಮನಕ್ಕೆ ಅತಿ ಮುಖ್ಯವಾದಂತಹ ಒಂದು ವಿಷಯವನ್ನು ತರಬೇಕೆಂದಿದ್ದೇನೆ ಅದೇನೆಂದರೆ, ನಾನು ಅತ್ಯಂತ ಕಳಕಳಿಯಿಂದ ಹೇಳುತ್ತೇನೆ, ಈ ಆಹಾರದ ಪರಿಸ್ಥಿತಿಯ ವಿಷಯದಲ್ಲಿ ನಾನು ಯಾವ ರಾಜಕೀಯವನ್ನೂ ಇಟ್ಟುಕೊಂಡಿಲ್ಲ. ಮೊಟ್ಟ ಮೊದಲನೆಯದಾಗಿ ನಮ್ಮ ದೇಶ ಹಿಂದೂಸ್ಥಾನವಲ್ಲಿ ಒಂದು ಭಾಗವಾಗಿದೆ. ಹೀಗಿರುವಾಗ ನಾವು ನಮ್ಮದೇ ಒಂದು ಆಹಾರದ ನೀತಿಯನ್ನು ಇಟ್ಟುಕೊಂಡಿದ್ದೇವೆ ಎಂಬುದನ್ನು ತಾವುಗಳೆಲ್ಲರೂ ಮರೆತುಬಿಡಬೇಕು. ಅನೇಕರು ಪದೇಪದೇ ಆಹಾರದ ನೀತಿಯ ವಿಷಯದಲ್ಲಿ ಮಾತನಾಡಿದ್ದಾರೆ. ಕೇಂದ್ರ ಸರ್ಕಾರದಲ್ಲಿ ಮೈಸೂರು ಸಂಸ್ಥಾನದ್ದೇ ಬೇರೆ ಆಹಾರ ನೀತಿ ಇಲ್ಲ. ನಾವು ಇಲ್ಲಿ ಹಿಂದೂಸ್ಥಾನದ ಆಹಾರ ನೀತಿಯನ್ನೇ ಜಾರಿಗೆ ತರಬೇಕಾಗುತ್ತದೆ. ಕೇಂದ್ರ ಸರ್ಕಾರದವರು ಈ ಆಹಾರದ ವಿಷಯದಲ್ಲಿ ಯಾವ ಒಂದು ನೀತಿಯನ್ನು ಮಾಡಬೇಕಾದರೂ ಆಯಾ ರಾಜ್ಯಗಳಿಗೆ ಸಂಬಂಧಪಟ್ಟ ಮುಖ್ಯಮಂತ್ರಿಗಳನ್ನು ಮತ್ತು ಆಹಾರ ಮಂತ್ರಿಗಳನ್ನೂ ಕೇಂದ್ರ ಸರಕಾರಕ್ಕೆ ಕರೆಸಿಕೊಳ್ಳುತ್ತಾರೆ. ಅಲ್ಲಿ ಈ ಆಹಾರದ ವಿಷಯದಲ್ಲಿ ಕೂಲಂಕಷವಾಗಿ ಚರ್ಚೆಮಾಡಿ, ಅಖಿಲ ಭಾರತ ದೃಷ್ಟಿಯಿಂದ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ. ಈ ರೀತಿಯಾಗಿ ಈ ಆಹಾರದ ವಿಷಯದಲ್ಲಿ ಕೇಂದ್ರ ಸರ್ಕಾರದಲ್ಲಿ ಏನೊಂದು ನೀತಿಯನ್ನು ಅನುಸರಿಸಬೇಕು, ಜಾರಿಗೆ ತರಬೇಕೆಂದು ಹೇಳುತ್ತಾರೆಯೋ ಅದೇ ನೀತಿಯನ್ನು ನಾವು ಇಲ್ಲಿ ಸಂಸ್ಥಾನದಲ್ಲಿ ಜಾರಿಗೆ ತರಬೇಕು. ಕೇಂದ್ರ ಸರ್ಕಾರದಲ್ಲಿ ಒಂದು ನೀತಿ, ಸಂಸ್ಥಾನದಲ್ಲಿ ಒಂದು ನೀತಿಯನ್ನು ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಈಗ ಉದಾಹರಣೆಗೆ ಹೇಳುವುದಾದರೆ, ನಮ್ಮ ಮೈಸೂರು ಸಂಸ್ಥಾನದಲ್ಲಿ ಜೋಳಕ್ಕೆ ಒಂದು ಕ್ವಿಂಟಾಲಿಗೆ 50 ರೂಪಾಯಿ ಎಂದು ನಿಗದಿ ಮಾಡಿ, ಮಹಾರಾಷ್ಟ್ರದವರು ಒಂದು ಕ್ವಿಂಟಾಲಿಗೆ 60 ರೂಪಾಯಿ ನಿಗದಿ ಮಾಡಿದರೆ ಇಲ್ಲಿಯ ಜೋಳವೆಲ್ಲವೂ ಮಹಾರಾಷ್ಟ್ರಕ್ಕೆ ಹೋಗುತ್ತದೆ. ಹೀಗೆ ಒಂದೊಂದು ಸಂಸ್ಥಾನದಲ್ಲಿ ಒಂದೊಂದು ನೀತಿಯನ್ನು ಇಟ್ಟುಕೊಂಡರೆ ಅದರಿಂದ ದುಷ್ಪರಿಣಾಮಗಳು ಆಗುತ್ತವೆ ಎಂಬುದು ಇದರಿಂದ ಗೊತ್ತಾಗುತ್ತದೆ. ನಮ್ಮ ರಾಜ್ಯ ಆಹಾರದ ವಿಷಯದಲ್ಲಿ ಕೊರತೆಯ ರಾಜ್ಯವಾಗಿದೆ. ಆದುದರಿಂದ ಕೇಂದ್ರ ಸರ್ಕಾರದವರ ಸಹಾಯವನ್ನು ನಾವು ಪಡೆಯಲೇಬೇಕಾಗಿದೆ. ಕೇಂದ್ರ ಸರ್ಕಾರದವರ ಮರ್ಜಿಯಲ್ಲಿ ನಾವು ಇದ್ದೇವೆ. ಅವರ ದಾಕ್ಷಿಣ್ಯದಲ್ಲೇ ನಾವು ಕೆಲಸ ಮಾಡುತ್ತಿದ್ದೇವೆ. ಹೀಗಿರುವಾಗ ಅವರ ಒಂದು ಆಹಾರದ ನೀತಿಯನ್ನು ನಾವು ಅನುಸರಿಸುವುದು ತಪ್ಪು ಎಂದು ನಾವು ಬಹಿರಂಗವಾಗಿ ಹೇಳುವುದಕ್ಕಾಗುವುದಿಲ್ಲ. ಬೆಳಗಾದರೆ ಆಹಾರ ಧಾನ್ಯಗಳು ನಮಗೆ ಕೇಂದ್ರ ಸರ್ಕಾರದಿಂದ ಬರಬೇಕಾಗುತ್ತದೆ. ಇಂಥಾ ಒಂದು ಪರಿಸ್ಥಿತಿಯಲ್ಲಿ ನಾವು ನಮ್ಮದೇ ಆದ ಆಹಾರದ ನೀತಿಯನ್ನು ನಮ್ಮ ಸಂಸ್ಥಾನಕ್ಕೆ ಹಾಕಿಕೊಂಡಿಲ್ಲ ಎಂಬುದನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕು. ಮತ್ತು ಆ ರೀತಿ ಮಾಡುವುದಕ್ಕೆ ಆಗುವುದೂ ಇಲ್ಲ. ಕೇಂದ್ರ ಸರ್ಕಾರದವರನ್ನು ಬಿಟ್ಟು ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದವರು ಹೊರ ರಾಷ್ಟ್ರಗಳಿಂದ ಆಹಾರವನ್ನು ತೆಗೆದುಕೊಂಡು ಬಂದು ಆಹಾರದ ಕೊರತೆ ಇರುವ ಸಂಸ್ಥಾನಗಳಿಗೆ ಕೊಡತಕ್ಕಂಥ ಕಾರ್ಯ ಅಷ್ಟು ಸುಲಭವಾದ ಕಾರ್ಯವಲ್ಲ. ಆಹಾರದ ವಿಚಾರದಲ್ಲಿ ಪ್ರತಿಯೊಬ್ಬ ಮಾನ್ಯ ಸದಸ್ಯರೂ ಕೂಡ ಸೂಚನೆ ಕೊಡುತ್ತಾರೆ, ಹಾಗೆ ಮಾಡಬೇಕಾಗಿತ್ತು ಹೀಗೆ ಮಾಡಬೇಕಾಗಿತ್ತು, ಸರ್ಕಾರದವರು ತಪ್ಪುಮಾಡಿದ್ದಾರೆ, ನ್ಯಾಯ ಮಾಡಲಿಲ್ಲ ಎಂದು ಹೇಳಿದರು. ಆಹಾರದ ವಿಷಯ ಎಲ್ಲರಿಗೂ ಸಂಬಂಧಪಟ್ಟ ವಿಷಯ. ಆದ್ದರಿಂದ ಒಬ್ಬೊಬ್ಬರಿಗೂ ಕೂಡ ಒಂದೊಂದು ವಿಷಯ ತಿಳಿದಿರುತ್ತದೆ. ಈ ದೃಷ್ಟಿಯಿಂದ ಎಲ್ಲರೂ ಸಹ ಅದರಲ್ಲಿ ಎಕ್ಸ್‌ಪರ್ಟ್, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಪ್ರತಿಯೊಬ್ಬ ಮಾನ್ಯ ಸದಸ್ಯರೂ ಏನು ಸಲಹೆಯನ್ನು ಕೊಡುತ್ತಾರೆಯೋ ಅದಕ್ಕನುಗುಣವಾಗಿ ಕೇಂದ್ರ ಸರ್ಕಾರದವರು ಆದೇಶವನ್ನು ಕೊಡದೆ ಇದ್ದರೆ

ನಾವು ಏನು ಮಾಡುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದವರು ಏನು ನೀತಿಯನ್ನು ನಮಗೆ ಹಾಕಿ ಕೊಟ್ಟಿದ್ದಾರೆಯೋ ಆ ನೀತಿಯನ್ನು ಇಲ್ಲಿ ನಾವು ಜಾರಿಗೆ ತರುತ್ತೇವೆ. ಈ ಆಹಾರದ ವಿಷಯದಲ್ಲಿ ನಮ್ಮ ದೇಶಕ್ಕೆ ಅನೇಕ ತೊಂದರೆಗಳು ಬಂದುವು. ಆಂಧ್ರ ಪ್ರಾಂತದಿಂದ ನಮ್ಮ ದೇಶಕ್ಕೆ ಬರುತ್ತಾ ಇದ್ದಂಥ ಅಕ್ಕಿಯು ನಿಂತುಹೋಯಿತು. ಸುಮಾರು ಎರಡು ಲಕ್ಷ ಟನ್ ಅಕ್ಕಿ ಆಂಧ್ರದಿಂದ ನಮಗೆ ಬರುತ್ತಿತ್ತು. ನಮ್ಮ ದೇಶದ ಅಕ್ಕಿ ಸ್ವಲ್ಪ ಕೇರಳಕ್ಕೆ ಹೋಗುತ್ತಿದೆ. ಆಂಧ್ರದಲ್ಲಿ ಪ್ರವಾಹ ಬಂದು ಅಲ್ಲಿ ಬೇಕಾದಷ್ಟು ಬೆಳೆ ನಷ್ಟವಾಯಿತು. ಇದರ ದೆಶೆಯಿಂದ ನಮಗೆ ಆಂಧ್ರದಿಂದ ಬರುತ್ತಿದ್ದಂಥ ಅಕ್ಕಿ ನಿಂತುಹೋಯಿತು. ಆಗ ಕೇಂದ್ರ ಸರ್ಕಾರದಲ್ಲಿಯೂ ಅಕ್ಕಿ ಇರಲಿಲ್ಲ. ಕಾಂಬೋಡಿಯಾ ಮತ್ತು ತಾಯಿಲ್ಯಾಂಡ್‌ನಿಂದ ಸ್ಟೀಮರ್‌ನಲ್ಲಿ ನಮ್ಮ ದೇಶಕ್ಕೆ ಅಕ್ಕಿ ಬರಲಿಲ್ಲ. ಕೇಂದ್ರದಿಂದ ಮತ್ತು ಆಂಧ್ರ ಪ್ರಾಂತ್ಯದಿಂದ ಯಾವಾಗ ನಮಗೆ ಅಕ್ಕಿ ಬರಲಿಲ್ಲವೋ ಆಗ ನಾವು ಇಲ್ಲಿ ಏನು ಮಾಡಿದರೂ ಬೆಂಗಳೂರಿನಲ್ಲಿ ಅಕ್ಕಿಯನ್ನು ಒದಗಿಸುವಂತಹ ಪರಿಸ್ಥಿತಿಯಲ್ಲಿ ಇರಲಿಲ್ಲ. ಮಾನ್ಯ ಸದಸ್ಯರು ಕೆಲವರು ಹೇಳಬಹುದು, ಹಿಂದೆಯೇ ನಾವು ಹೇಳಿದೆವಲ್ಲಾ 3 ಲಕ್ಷ ಟನ್ ಅಕ್ಕಿ ಅಭಾವ ಇದೆ ಅದಕ್ಕೆ ಏನು ಮಾಡುತ್ತೀರಿ ಎಂದು. ನಾವೇನೋ 5 ಲಕ್ಷ ಟನ್ ಅಕ್ಕಿಯ ಅಭಾವ ಇದೆಯೆಂದು ಅಂದಾಜು ಮಾಡುತ್ತೇವೆ. ಆದರೆ ಅಕ್ಕಿಯನ್ನು ಕೊಡುವವರು ಯಾರು ? ಒಂದು ವೇಳೆ ಕೊಡುವವರು ಇದ್ದರೂ ಅವರಿಗೆ ಎಷ್ಟು ಬೇಕೋ ಅಷ್ಟನ್ನು ಇಟ್ಟುಕೊಂಡು ಮಿಕ್ಕಿದ್ದನ್ನು ಕೊಡುತ್ತಾರೆ. ಹೀಗಾಗುತ್ತದೆ ಎಂಬುದು ನಿಮಗೆ ಗೊತ್ತಿರಲಿಲ್ಲವೇ ಎಂದರೆ ನಮಗೆ ಗೊತ್ತಿತ್ತು. ಏನು ಮಾಡುವುದು ? ಅನೇಕ ಕಾರಣಗಳಿಂದ ಆಂಧ್ರದಿಂದ ಬರುತ್ತಾ ಇದ್ದಂತಹ ಅಕ್ಕಿಯು ನಿಂತುಹೋಯಿತು. ಅದನ್ನು ರೀಪ್ಲೇಸ್ ಮಾಡುವುದಕ್ಕೆ ನಮ್ಮಲ್ಲಿ ಹೆಚ್ಚು ದಾಸ್ತಾನು ಇಲ್ಲದೆ ಇದ್ದುದರಿಂದ ನಾವು ಎರಡು ಮೂರು ತಿಂಗಳು ಕಷ್ಟವನ್ನು ಅನುಭವಿಸಬೇಕಾಯಿತು. ಈಗ ಆಹಾರವನ್ನು ಹೆಚ್ಚು ಉತ್ಪಾದನೆ ಮಾಡುವುದಕ್ಕೆ ನಮ್ಮ ದೇಶದಲ್ಲಿ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಈ ಆಹಾರದ ವಿಷಯದಲ್ಲಿ ನಮ್ಮ ಸಂಸ್ಥಾನದಲ್ಲಿ ಸ್ವಲ್ಪ ಕಾಲ ಎಂದರೆ ಎರಡು ಮೂರು ತಿಂಗಳು ಜನಗಳಿಗೆ ಸ್ವಲ್ಪ ತೃಪ್ತಿಯನ್ನು ಉಂಟುಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಈ ವಿಷಯದಲ್ಲಿ ನಾವು ನಮ್ಮ ಶಕ್ತಿ ಮೀರಿ ಸರ್ವಪ್ರಯತ್ನಗಳನ್ನೂ ಮಾಡಿದ್ದೇವೆ. ಇದರಲ್ಲಿ ನಮ್ಮದೇನಾದರೂ ತಪ್ಪಿದ್ದರೆ ಆ ಬಗ್ಗೆ ನಾವು ಜನಗಳ ಕ್ಷಮಾಪಣೆಯನ್ನು ಕೇಳಬೇಕಾಗಿದೆ. ಹೊರಗಡೆಯಿಂದ ನಮ್ಮ ರಾಜ್ಯಕ್ಕೆ ಬರುತ್ತಿದ್ದಂಥ ಅಕ್ಕಿಯು ನಿಂತುಹೋಗಿ ನಮಗೆ ಸ್ವಲ್ಪ ತೊಂದರೆ ಆಯಿತು. ಈಗ ನಮ್ಮ ಪಕ್ಕದ ಸಂಸ್ಥಾನವಾದ ಕೇರಳದಲ್ಲಿ ಇವೊತ್ತು ಕೂಡ ಒಂದು ಕೆ. ಜಿ. ಅಕ್ಕಿಗೆ 2 ರೂಪಾಯಿ ಇದೆ. ಇಲ್ಲಿ ನಮ್ಮ ಸಂಸ್ಥಾನದಲ್ಲಿ ಒಂದು ಕೆ ಜಿ. ಅಕ್ಕಿಗೆ 75 ನಯಾ ಪೈಸದಂತೆ ಮಾರಾಟ ಮಾಡುತ್ತಿದ್ದೇವೆ. ನಮ್ಮ ರಾಜ್ಯ, ಮದ್ರಾಸು ಮತ್ತು ಕೇರಳ ಇವು ಆಹಾರದಲ್ಲಿ ಸ್ವಲ್ಪ ಕೊರತೆಯ ರಾಜ್ಯಗಳು. ಈಗ ನಾವು ಒಂದು ಪಾಲಸಿಯನ್ನು ಹಾಕಿಕೊಂಡು ಬತ್ತದ ದಾಸ್ತಾನನ್ನು ಮಾಡುತ್ತಿದ್ದೇವೆ. ಇನ್ನು ಮೇಲೆ ನಮ್ಮ ರಾಜ್ಯದಲ್ಲಿ ರೈತರ ಹತ್ತಿರ ಬತ್ತವನ್ನು ವಸೂಲು ಮಾಡುವಾಗ ಎಕರೆಯ ಆಧಾರದ ಮೇಲೆ (ಎಕರೇಜ್ ಲೆವಿ ಸಿಸ್ಟಮ್) ಬತ್ತವನ್ನು ವಸೂಲು ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಈಗ ಮದ್ರಾಸಿನಲ್ಲಿ ಮತ್ತು ಕೇರಳದಲ್ಲಿ ಸ್ವಲ್ಪ ಅಕ್ಕಿಯ ಡೆಫಿಸಿಟ್ ಇದ್ದರೂ ಕೂಡ ಮದ್ರಾಸಿನಲ್ಲಿರುವ ಸೆಂಟ್ರಲ್ ಗೋಡೌನ್‌ನಲ್ಲಿ ಕೇಂದ್ರ ಸರ್ಕಾರದವರು ಅಕ್ಕಿಯನ್ನು ದಾಸ್ತಾನು ಮಾಡಿರುವುದರಿಂದ ಅಲ್ಲಿ ಅವರಿಗೆ ಬೇಕಾದಾಗ ಕೈ ಹಾಕಬಹುದು. ಮತ್ತು ಕಡಲೂರು, ಟುಟಿಕೋರಿನ್, ಅಲಪ್ಪಿ, ಕೋಯಿಲೋನ್ ಈ ಸ್ಥಳಗಳಿಗೆ ಸ್ಟೀಮರ್ ಕಳುಹಿಸಿ ಅಲ್ಲಿ ಅಕ್ಕಿಯನ್ನು ಅನ್‌ಲೋಡ್ ಮಾಡುತ್ತಾರೆ. ಆ ಒಂದು ಧೈರ್ಯ ಅವರಿಗೆ ಇದೆ. ಆದರೆ ನಾವು ಮದ್ರಾಸಿನಿಂದ ಅಕ್ಕಿಯನ್ನು ತರಬೇಕಾದರೆ ಸ್ವಲ್ಪ ಕಷ್ಟ; ಏತಕ್ಕೆಂದರೆ ನಮ್ಮ ಬೆಂಗಳೂರು ಪಟ್ಟಣ 3 ಸಾವಿರ ಅಡಿ ಎತ್ತರದಲ್ಲಿದೆ. ನಾವು ಬೆಟ್ಟದ ಮೇಲೆ ಕುಳಿತುಕೊಂಡಿದ್ದೇವೆ. ನಾವು ಇಲ್ಲಿಗೆ ಆಹಾರವನ್ನು ರೈಲಿನಲ್ಲಿ ತೆಗೆದುಕೊಂಡು ಬರಬೇಕು. ರೈಲಿನಲ್ಲಿ 10 ಸಾವಿರ ಟನ್ನಿಗೆ ಮೇಲೆ ಸಾಗಿಸುವುದಕ್ಕೆ ಆಗುವುದಿಲ್ಲ. ನಮಗೆ ಈ ಎರಡು ತಿಂಗಳು 30-30 ಸಾವಿರ ಟನ್ ದವಸ ನ್ಯಾಯವಾಗಿ ಹಂಚಿದ್ದರೆ ಬೇಕಾಗಿತ್ತು. ಆದ್ದರಿಂದ ರಸ್ತೆ ಮುಖಾಂತರ ತರಬೇಕಾಯಿತು. ಯಾರಿಗೋ ಸಹಾಯ ಮಾಡುವುದಕ್ಕೋಸ್ಕರ ರಸ್ತೆಯಲ್ಲಿ ತಂದೆವು ಎಂದು ತಿಳಿದುಕೊಳ್ಳಬಾರದು. ರೈಲ್ವೆ ಮ್ಯಾಕ್ಸಿಮಮ್ ಕೆಪ್ಯಾಸಿಟಿ ಮೀರಿ, ಅದರ ಜೊತೆಗೆ ಹೆಚ್ಚು ಬೇಕಾಗಿತ್ತು. ಬಂದ ದವಸವನ್ನು ಜಿಲ್ಲೆಗೆ ಅಲಾಟ್ ಮಾಡುತ್ತೇವೆ.

Mr. SPEAKER.—The House will now rise for half-an-hour recess.

The House adjourned for Recess at Ten of the Clock and reassembled at Thirty minutes past Ten of the Clock.

[MR. SPEAKER in the Chair.]

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಮೈಸೂರು ಸಂಸ್ಥಾನದ ಆಹಾರ ನೀತಿ ಅಂತ ಇಲ್ಲ. ನಾವು ಕೇಂದ್ರ ಸರ್ಕಾರ ಆಹಾರದ ನೀತಿಯನ್ನು ಜಾರಿಗೆ ತರಬೇಕು. ಆದ್ದರಿಂದ ಇದು ನಮ್ಮ ಸರ್ಕಾರದ ಆಹಾರ ನೀತಿ ಎಂದು ತಾವು ಮನಸ್ಸಿನಲ್ಲಿ ಇಟ್ಟುಕೊಳ್ಳಬಾರದು, ಹಿಂದೂಸ್ತಾನದ ಆಹಾರ ಪರಿಸ್ಥಿತಿ ಚೆನ್ನಾಗಿರಬೇಕು, ಅಲ್ಲಿ ಚೆನ್ನಾಗಿದ್ದರೆ ನಮ್ಮ ಪರಿಸ್ಥಿತಿ ಕೂಡ ಚೆನ್ನಾಗಿರುತ್ತದೆ. ಅದಿಲ್ಲವೇನೆ, ಏನು ಪ್ರಯತ್ನ ಮಾಡಿದರೂ, ಎಷ್ಟೇ ಬುದ್ಧಿವಂತರಿದ್ದರೂ, ಏನೂ ಪ್ರಯೋಜನವಿಲ್ಲವೆಂದು ಈ ನನ್ನ 13-15 ವರ್ಷದ ಮಂತ್ರಿ ಪದವಿಯ ಅನುಭವದಿಂದ ಹೇಳುತ್ತಿದ್ದೇನೆ. ನಾನು ಈ ಮಾನ್ಯ ಸಭೆಯ ಮುಖಾಂತರ ಕೇಂದ್ರ ಸರಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಮೊದಲು ಹಿಂದೂಸ್ತಾನದ ಆಹಾರ ಪರಿಸ್ಥಿತಿಯನ್ನು ಸ್ವಲ್ಪ ಸುಧಾರಣೆ ಮಾಡಿ, ಅದು ಮಾಡಬೇಕಾದರೆ, ನನ್ನ ಒಂದೆರಡು ಸಲಹೆಗಳನ್ನು ಈ ಸಭೆಯ ಮುಖಾಂತರ ಹೇಳುತ್ತೇನೆ. ಈಗ ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಈಗಿರುವ ರಿಸ್ಟ್ರಿಕ್ಷನ್ನುಗಳು ಇರಕೂಡದು; ಅಂದರೆ ಪ್ರತ್ಯೇಕ ಸಂಸ್ಥಾನ, ಸಂಸ್ಥಾನಜೋನ ಗಳು, ಚೆಕ್‌ಪೋಸ್ಟುಗಳು ಇದು ಎಲ್ಲಾ ಇದ್ದರೆ ಆಗುವುದಿಲ್ಲ, ಬಹಳ ಕಷ್ಟವಾಗುವುದು. ಹಿಂದೂಸ್ತಾನವನ್ನೆಲ್ಲಾ ಒಂದೇ ರೀಜನ್ ಮಾಡದೆ ಇದ್ದರೆ, ಒಂದೇ ಜೋನ್ ಮಾಡದೇ ಇದ್ದರೆ, ಈ ದೇಶಕ್ಕೆ ಬಹಳ ವಿಪತ್ತು ಇದೆ. ಈ ಆಹಾರ ಪರಿಸ್ಥಿತಿಯಲ್ಲಿ Post-constitution periodನಲ್ಲಿ ಕಂಟ್ರೋಲ್ಸ್ ಜಾರಿಗೆ ತರಬೇಕೆಂದರೆ, ಹೊರಗಡೆಯವರು ಹೇಳುವಷ್ಟು ಸುಲಭವಲ್ಲ. Pre-constitution periodನಲ್ಲಿ, ವಿರೋಧ ಪಕ್ಷಗಳು ಇರಲಿಲ್ಲ, ಆಗಿದ್ದದ್ದು ಕಾಂಗ್ರೆಸ್ ಪಾರ್ಟಿ ಒಂದೇ, ಅಂತಹುದರಲ್ಲಿ ಡಿಫೆನ್ಸ್ ಆಫ್ ಇಂಡಿಯಾ ಆಕ್ಟನ್ನು ಬೇಕಾದಷ್ಟು ಉಪಯೋಗಿಸಿಕೊಂಡೂ, ಕಂಟ್ರೋಲ್ಸ್ ಸಕ್ಸೆಸ್‌ಫುಲ್ಲಾಗಿ ನಡೆಯಲಿಲ್ಲ ಮತ್ತೆ ಆವಾಗ ಬ್ರಿಟಿಷ್ ಸರ್ಕಾರಕ್ಕೆ ಬೇಕಾದಷ್ಟು ಅಧಿಕಾರವಿತ್ತು. ಕಂಟ್ರೋಲ್ಸ್ ಅಂದರೆ ಕರಪ್ಷನ್, ಬರಬಾರದ ತೊಂದರೆಗಳು ಬರುತ್ತವೆ. ಹಿಂದೂಸ್ತಾನ ದೊಡ್ಡ ರಾಷ್ಟ್ರ; Post-constitution periodನಲ್ಲಿ ಅನೇಕ ವಿರೋಧ ಪಕ್ಷಗಳು ದೇಶದಲ್ಲಿವೆ, ಜನತೆಗೆ ಅನೇಕ ತರಹ ಸ್ವಾತಂತ್ರ್ಯವನ್ನು ಕೊಟ್ಟಿದ್ದೇವೆ, freedom of press, freedom of speech, freedom of movement ಎಲ್ಲಾ ಇದೆ, ಇಂತಹುದರಲ್ಲಿ ಕಂಟ್ರೋಲ್ಸ್ ಇಟ್ಟುಕೊಂಡು, ಒಂದು ರೀಜನ್ನಿನಿಂದ ಇನ್ನೊಂದು ರೀಜನ್ನಿಗೆ, ಒಂದು ಸಂಸ್ಥಾನದಿಂದ ಇನ್ನೊಂದು ಸಂಸ್ಥಾನಕ್ಕೆ, ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಆಹಾರ ವಸ್ತುಗಳು ಹೋಗದಂತೆ ಚೆಕ್‌ಪೋಸ್ಟು ಇಟ್ಟು, ನಿಬಂಧನೆಗಳ ಮೂಲಕ ಮಾಡುತ್ತೇವೆಂದರೆ ಯಶಸ್ವಿಯಾಗಿ ಆಗದ ಕೆಲಸ. ಶಿವಮೊಗ್ಗದ ಅಕ್ಕಿ ಸೌತ್ ಕೆನರಾಕ್ಕೆ ಹೋಗದ ಹಾಗೆ ವ್ಯವಸ್ಥೆ ಮಾಡಿರುವುದೇ ಕಷ್ಟವಾಗಿರುವಾಗ, ಅದು ಕೇರಳಕ್ಕೆ ಹೋಗದ ಹಾಗೆ ಮಾಡಬೇಕೆಂದರೆ ಮತ್ತಷ್ಟು ಅಸಾಧ್ಯವಾದ ಮಾತು. ಈ ವಿಷಯವನ್ನು ಫ್ರಾಂಕ್ ಆಗಿ ಹೇಳುತ್ತಿದ್ದೇನೆ. ಹಿಂದೂಸ್ತಾನದಲ್ಲಿ ಯಾವ ವರ್ಷ ಕೂಡ ಎಲ್ಲಾ ಸಂಸ್ಥಾನಗಳಲ್ಲಿಯೂ ಮಳೆ ಬರುವುದಿಲ್ಲ. ಕೆಲವು ಸಂಸ್ಥಾನಗಳಲ್ಲಿ ಮಳೆ ಜಾಸ್ತಿ ಬರುತ್ತದೆ, ಕೆಲವುಗಳಲ್ಲಿ ಕಡಿಮೆ ಆಗುತ್ತದೆ. ದೊಡ್ಡ ರಾಷ್ಟ್ರ, ಚೆನ್ನಾಗಿ ಬೆಳೆ ಬಾರದಿದ್ದರೆ ನಾರ್ಮಲ್ ಟ್ರೇಡ್ ಚಾನಲ್ಸ್ ಅಫೆಕ್ಟ್ ಆಗುತ್ತದೆ. ಆದ್ದರಿಂದ, ಕಷ್ಟ ಬಂದರೆ ಹಿಂದೂಸ್ತಾನದ ಜನರೆಲ್ಲ ಕಷ್ಟ ಅನುಭವಿಸೋಣ; ಹೆಚ್ಚಿಗೆ ಬೆಳೆ ಬಂದರೆ ಅದರ ಸುಖವನ್ನು ಎಲ್ಲಾ ಅನುಭವಿಸೋಣ. ನಮ್ಮ ನಮ್ಮ ಸಂಸ್ಥಾನದಲ್ಲಿ ಬೆಳೆದಷ್ಟು, ನಮ್ಮ ನಮ್ಮ ಉಪಯೋಗಕ್ಕೇ ಇರಬೇಕು ಎಂಬುದು ಕೆಟ್ಟ ಸೈಕಾಲಜಿ. ಆ ಮನೋಭಾವ ಅಲ್ಲಿಗೇ ಉಳಿಯುವುದಿಲ್ಲ. ಅದು ಟ್ರೈಬಲ್ ಕ್ಯಾರೆಕ್ಟರಾಗಿ ಪರಿಣಮಿಸುತ್ತದೆ. ಆಯಾ ಜಿಲ್ಲೆಯಲ್ಲಿ ಬೆಳೆದ ಆಹಾರ ಆಯಾ ಜಿಲ್ಲೆಯಲ್ಲಿಯೇ ಇಟ್ಟುಕೊಳ್ಳಬೇಕೆಂಬ ಮನೋಭಾವ ಬರುತ್ತದೆ; ಆಯಾ ಜಿಲ್ಲೆಗೆ ಬೇಕಾದಷ್ಟು ಇಟ್ಟುಕೊಂಡು ಜಾಸ್ತಿಯಾದುದನ್ನು ಹೊರಗಡೆಗೆ ಕೊಡಿ ಅಂದರೂ, ಆಯಾ ಜಿಲ್ಲೆಯಲ್ಲಿ ಎಷ್ಟು ಬೆಳೆಯುತ್ತದೋ ಅಷ್ಟಕ್ಕೂ ಜಾಸ್ತಿ ಲೆಕ್ಕ ಕೊಟ್ಟು ಅವಶ್ಯಕತೆ ತೋರಿಸುತ್ತಾರೆ. ತಾಲ್ಲೂಕು ಲೆವಲ್ಲಿಗೂ ಇದು ಇಳಿಯುತ್ತದೆ. ಒಂದು ಜಿಲ್ಲೆಯಲ್ಲಿರುವ ಎಲ್ಲ ತಾಲ್ಲೂಕುಗಳು ಆಹಾರದಲ್ಲಿ ಸ್ವಯಂಪರಿಪೂರ್ಣವಾಗಿರುವುದಿಲ್ಲ; 3-4 ತಾಲ್ಲೂಕುಗಳು ಸರ್‌ಪ್ಲಸ್ ಆಗಿದ್ದರೆ ಬಾಕಿ ಡಿಫಿಸಿಟ್ ಆಗಿರುವ 4-5 ತಾಲ್ಲೂಕುಗಳಿಗೆ ಆ ಆಹಾರ ಹೋಗಬಾರದು ಎಂದು ಹೇಳುತ್ತಾರೆ. ಈ ಸೈಕಾಲಜಿ ಹೋಬಳಿ ಲೆವಲ್ಲಿನಲ್ಲಿ ಹೋಗಿ, ವಿಲೇಜ್ ಲೆವಲ್ಲಿಗೂ ಬಂದಿದೆ. ಈ ಟ್ರೈಬಲ್ ಕ್ಯಾರೆಕ್ಟರು ಹೋಗದಿದ್ದರೆ ಈ ಕಹಿ ಅನುಭವ ತಪ್ಪುವುದಿಲ್ಲ. ಕಂಟ್ರೋಲುಗಳನ್ನು ತೆಗೆದು ಹಿಂದೂಸ್ತಾನವೆಲ್ಲಾ ಒಂದೇ ಜೋನ್ ಆಗಬೇಕು ಇದನ್ನು ಮಾಡದೆ ನಿರ್ಬಂಧಗಳು ಹೋಗುವುದಕ್ಕೆ ಆಗುವುದಿಲ್ಲ. ಆದ್ದರಿಂದ ಕೇಂದ್ರ ಸರ್ಕಾರದ ಆಹಾರ ನೀತಿ ಸರಿ ಹೋಗಬೇಕು ಅದು ಸರಿ ಹೋಗಬೇಕಾದರೆ ಪ್ರತ್ಯೇಕ ಜೋನುಗಳು ಹೋಗಬೇಕು, ಹಿಂದೂಸ್ತಾನವೆಲ್ಲಾ ಒಂದೇ ಜೋನ್ ಆಗಬೇಕು ಆಮೇಲೆ ಪ್ರೊಡಕ್ಷನ್ ಮತ್ತು ಪಾಪ್ಯುಲೇಶನ್ ಕಂಟ್ರೋಲ್ ಇರಬೇಕು ಜನಸಂಖ್ಯೆ ಏರುತ್ತಾ ಇದೆ. ಹೆಚ್ಚಿಗೆ ಇನ್ವೆಸ್ಟ್‌ಮೆಂಟ್ ಮಾಡಬೇಕು. ಮೊದಲನೆಯ ಮತ್ತು ಎರಡನೆಯ

ಪ್ಲಾನಿನಲ್ಲಿ ಕೇಂದ್ರ ಸಕಾರದವರನ್ನು 4 ಸಾವಿರ ಕೋಟಿ ಕೊಡಿ ಅಂದರೆ 600 ಕೋಟಿ ಕೊಟ್ಟರು. ಪ್ರತಿಯೊಂದು ಪ್ಲಾನಿಗೂ ಎಷ್ಟು ಕೇಳಿದ್ದೆವೋ ಆದರಲ್ಲ ಕಾಲು ಭಾಗ, ಹತ್ತನೆ ಒಂದು ಭಾಗ ಕೊಟ್ಟರು. ನಾನು ಪ್ರಪಂಚದಲ್ಲಿ ಹೆಚ್ಚು ಕಡಿಮೆ ಎಲ್ಲಾ ರಾಷ್ಟ್ರಗಳಲ್ಲಿಯೂ ಓಡಾಡಿಕೊಂಡು ಬಂದಿದ್ದೇನೆ ; ರಷ್ಯಕ್ಕೆ 3-4 ಸಾರಿ, ಚೈನಾಕ್ಕೆ 2-3 ಸಲ, ಜಪಾನಿಗೆ, ಅಮೇರಿಕಕ್ಕೆ, ಕೆನಡಾ, ನ್ಯೂಜಿಲೆಂಡಿಗೆ ಹೋಗಿ ಬಂದಿದ್ದೇನೆ. ಅಲ್ಲಿಯ ವ್ಯವಸಾಯ ಪದ್ಧತಿಯನ್ನು ನೋಡಿದ್ದೇನೆ. ಯಾವ ರಾಷ್ಟ್ರದಲ್ಲಿಯೂ ಹೆಚ್ಚಿಗೆ ಇನ್ವೆಸ್ಟ್‌ಮೆಂಟ್ ಮಾಡದೆ ಆಹಾರ ಬೆಳೆಯುತ್ತಾ ಇಲ್ಲ. ವ್ಯವಸಾಯ ಕೂಡ ಒಂದು ಕೈಗಾರಿಕೆ. In industry, more production means more investment. The same holds good in agriculture also. Unless we invest more in agriculture, we cannot produce more. Mere lip sympathy, mere seminars or training farms will not produce food. If you want to produce more foodstuffs, you mu-t spend more money on bigger programmes and provide irrigation facilities. Physical help ಬೇಕು. ಹೆಚ್ಚಿಗೆ ನೀರು ಕೊಡಬೇಕು, ಗೊಬ್ಬರ ಕೊಡಬೇಕು ; ಬೇಸಾಯಗಾರನಿಗೆ ಹಣ ಸಹಾಯ ಮಾಡಬೇಕು ; ಅವನಿಗೆ ಬೇಕಾದಂಥ ಹುಳುಹುಪ್ಪಟಗಳನ್ನು ನಾಶಮಾಡುವ ಔಷದಗಳು ಮತ್ತು ಇಂಪ್ಲಿಮೆಂಟುಗಳನ್ನು ಒದಗಿಸಬೇಕು. ರೈತನಿಗೆ ಫಿಸಿಕಲ್ ರೂಪದಲ್ಲಿ ಹೆಚ್ಚಿಗೆ ಹಣ, ಗೊಬ್ಬರ, ಮುಂತಾದ ಸಹಾಯ ಹೋಗದೆ, ಬರೀ ಭಾಷಣ, ಸೆಮಿನಾರುಗಳಿಂದ ಹೆಚ್ಚಿಗೆ ಉತ್ಪತ್ತಿಯಾಗುತ್ತದೆಂದು ನಿರೀಕ್ಷಿಸಿದರೆ ಅದು ಶುದ್ಧ ತಪ್ಪು. ಆದ್ದರಿಂದ ಹೆಚ್ಚಿಗೆ ಇನ್‌ವೆಸ್ಟ್‌ಮೆಂಟ್ ಮಾಡಬೇಕು. ಇದು ಮೊದಲನೇ ಅಂಶ ಆಹಾರಪರಿಸ್ಥಿತಿ ಸರಿಹೋಗಬೇಕಾದರೆ, ಎರಡನೇದು ಪಾಪ್ಯುಲೇಶನ್ ಕಂಟ್ರೋಲ್ ಇರಬೇಕು. ಇಲ್ಲದೆ ಹೋದರೆ ಬಹಳ ಕಷ್ಟ. ಪರಿಸ್ಥಿತಿ ಬಹಳ ಹದಗೆಡುತ್ತಾ ಇದೆ. ಮಂತ್ರ ಹೇಳಿ ಆಹಾರ ಬೆಳೆಯಬಹುದು ಎಂದು ಯಾರಾದರೂ ತಿಳಿದುಕೊಂಡಿದ್ದರೆ, ದೇವರ ಸಾಕ್ಷಿ ಆಗುವುದಿಲ್ಲ. ನಮ್ಮ ಜನಸಂಖ್ಯೆ, ಭೂಮಿ, ಬೆಳೆ, ದೇಶದಲ್ಲಿರುವ ಪರಿಸ್ಥಿತಿ ನೋಡಿದರೆ, ನನಗೆ ನಿದ್ರೆ ಹತ್ತುವುದಿಲ್ಲ. ಏಕೆಂದರೆ ನಾನು ಈ ಆಹಾರದ ಇಲಾಖೆಯಲ್ಲಿ ಕಳೆದ 13 ವರ್ಷದಿಂದ ಕೆಲಸ ಮಾಡುತ್ತಿರುವುದರಿಂದ, ನನಗೆ ಸ್ವಲ್ಪ ಅನುಭವ ಬಂದಿದೆ. ಈ ರೀತಿ ಬೆಳೆ ಉತ್ಪಾದನೆ ಇದ್ದೂ, ರೇಟ್ ಬಹಳ ಕಡಿಮೆ ಇದೆ. ಜನಸಂಖ್ಯೆ ವಿಪರೀತವಾಗುತ್ತಿದೆ. ಒಂದೊಂದು ವರ್ಷದಲ್ಲಿ ಒಂದೂಕಾಲು ಕೋಟಿಯಂತೆ ಜನಸಂಖ್ಯೆ ಜಾಸ್ತಿ ಯಾಗುತ್ತಿರುವುದನ್ನು ನೋಡಿದರೆ, ದೇಶದ ಮುಂದೆ ಭೀಕರ ಪರಿಸ್ಥಿತಿ ಇದೆಯೆಂದು ಭಯವಾಗು ತ್ತಿದೆ. ಪ್ರತಿಯೊಂದು ಮಗುವೂ ಬಾಯಿ ಇಟ್ಟುಕೊಂಡೇ ಹುಟ್ಟುತ್ತದೆ. ಹುಟ್ಟಿದಾಗಿನಿಂದ ಅದು ಕಿರುಚುತ್ತದೆ, ಹುಟ್ಟಿದಾಗಿನಿಂದ ಅದಕ್ಕೆ ಹಾಲೋ ಮೊಸರೋ ಬೇಕು. ಮನುಷ್ಯನಿಗೆ ಹುಟ್ಟಿದಾಗಿ ನಿಂದ ಸ್ಮಶಾನಕ್ಕೆ ಹೋಗುವವರೆಗೂ ಏನಾದರೂ ಕೊಡಬೇಕಾಗುತ್ತದೆ. ಅದನ್ನು ಎಲ್ಲಿಂದ ಕೊಡುತ್ತೀರ ವರ್ಷಂಪ್ರತಿ ಒಂದೂಕಾಲೂ ಕೋಟಿ ಜನಸಂಖ್ಯೆ ಜಾಸ್ತಿಯಾಗುತ್ತಿದ್ದರೆ? ಮುಂದೆ ಬರುವ 1971ನೇ ಇಸವಿ ಸೆನ್ಸಸ್ ಹೊತ್ತಿಗೆ ಈ ದೇಶದ ಜನಸಂಖ್ಯೆ 56 ಕೋಟಿಯಾಗುತ್ತದೆ. ಎಂದರೆ, ಈ ದೇಶದ ಜನಸಂಖ್ಯೆ ಇನ್ನು ಆರು ವರ್ಷಗಳೊಳಗೆ ಸುಮಾರು 56 ಕೋಟಿಯಷ್ಟು ಆಗು ತ್ತದೆ ಎಂದು ಲೆಕ್ಕ ಹಾಕಿದ್ದಾರೆ. ಇದನ್ನು ನೋಡಿದರೆ ಇನ್ನೂ ಜಾಸ್ತಿಯಾಗುತ್ತದೆಯೇ ಹೊರತು ಕಡಿಮೆಯೇನೂ ಆಗುವುದಿಲ್ಲ. ಈ ರೀತಿ ಜನಸಂಖ್ಯೆಯನ್ನು ನಾವು ಕಂಟ್ರೋಲು ಮಾಡದೇ ಇದ್ದರೆ ನಾವು ಎಷ್ಟು ಬೆಳೆ ಬೆಳೆದರೂ ಅದು ಸಾಲುವುದಿಲ್ಲ. ಈ ಎಲ್ಲ ದೃಷ್ಟಿಗಳಿಂದಲೂ ಕೇಂದ್ರ ಸರಕಾರದ ನೀತಿಯಿಂದಾಗಿ ಇಂತಹ ಪರಿಸ್ಥಿತಿಗೆ ಬಂದಿದ್ದೇವೆ. ಆದುದರಿಂದ ನಾನು ಈ ಸಭೆಯ ಮೂಲಕ ಕೇಂದ್ರ ಸರಕಾರಕ್ಕೆ ಸೂಚನೆ ಮಾಡುವುದು ಈ ದೇಶವೆಲ್ಲ ಒಂದೇ ಜೋನಾಗಿ ಮಾಡದೆ ಇದ್ದರೆ, ಜನ ಸಂಖ್ಯೆಯನ್ನು ಕಂಟ್ರೋಲ್ ಮಾಡದೆ ಇದ್ದರೆ ದೇಶದಲ್ಲಿ ಎಷ್ಟು ಹೆಚ್ಚಿಗೆ ಬೆಳೆದರೂ ಕೂಡ, ಅಕ್ಕಿಯೇ ಆಗಲಿ, ಗೋಧಿಯೇ ಆಗಲಿ, ಯಾವ ನಿರ್ಬಂಧಗಳನ್ನೂ ಜಾರಿಗೆ ತರುವುದಕ್ಕೆ ಆಗುವುದಿಲ್ಲ. ನಮ್ಮ ರಾಜ್ಯ ಸರಕಾರ ಷಾಕ್ ಅಬ್‌ಸಾರ್ಬರ್ ಇದ್ದಹಾಗೆ ಎಂದರೆ ಮೋಟಾರು ಗಾಡಿಯಲ್ಲಿ ಕುಳಿತು ಹೋಗುವಾಗ ಆ ಗಾಡಿ ರೋಡಿನ ಮೇಲೆ ಹೋಗುವಾಗ ಷಾಕ್‌ನ್ನು ಅಬ್‌ಸಾರ್ಬ್ ಮಾಡಿಕೊಂಡು ಹೋಗುತ್ತಿರುತ್ತದೆ. ಅದರಂತೆ ನಾವು ರಾಜ್ಯದಲ್ಲಿ ಕೇಂದ್ರ ಸರಕಾರ ಯಾವರೀತಿ ಮಾಡುತ್ತಿದೆ ಎನ್ನುವುದನ್ನು ಷಾಕ್ ಅಬ್‌ಸಾರ್ಬರ್ ಹಾಗೆ ನೋಡುತ್ತಿರುತ್ತೇವೆ. ಹಾಗೆ ನೋಡಿದುದರಿಂದಲೇ ನಾವು ಜನಗಳ ಕೈಯಲ್ಲಿ ಈಗ ಪೆಟ್ಟು ತಿನ್ನಬೇಕಾಗಿ ಬಂತು. ನಮ್ಮ ರಾಜ್ಯದ ಕಷ್ಟ ನಮಗೆ ಗೊತ್ತು. ಆದುದರಿಂದ ನಾನು ಇಲ್ಲಿ ಹೇಳುವುದು ಕೇಂದ್ರ ಸರಕಾರ ಸರಿಯಾಗಿ ಪರಿಶೀಲನೆ ಮಾಡಿ ದೇಶದಲ್ಲಿ ಹೆಚ್ಚು ಉತ್ಪಾದನೆ ಮಾಡದೇ ಇದ್ದರೆ, ಈ ದೇಶವನ್ನೆಲ್ಲಾ ಒಂದೇ ಜೋನಿನಂತೆ ಮಾಡದೆ ಇದ್ದರೆ, ಪಾಪ್ಯುಲೇಷನನ್ನು ಕಂಟ್ರೋಲ್ ಮಾಡದೇ ಇದ್ದರೆ, ಹೆಚ್ಚಿಗೆ ಉತ್ಪಾದನೆ ಮಾಡದೇ ಇದ್ದರೆ ಈ ದೇಶದಲ್ಲಿ ಇನ್ನು ಐದಾರು ವರ್ಷಗಳೊಳಗೆ ಮಾಸ್ ಸ್ಟಾರ್ವೇಷನ್ನು ದೊಡ್ಡದಾಗಿ ಬಂದು ಕಷ್ಟಪಡಬೇಕಾಗುತ್ತದೆ. ಈ ದೃಷ್ಟಿಯಿಂದ ಕೇಂದ್ರ ಸರಕಾರದವರು ಈಗಿನಿಂದಲೇ ಎಚ್ಚೆತ್ತುಕೊಂಡು

(ಶ್ರೀ ಎಂ. ವಿ. ಕೃಷ್ಣಪ್ಪ)

ಪ್ರಯತ್ನಪಟ್ಟು ಇದನ್ನು ಸರಿಪಡಿಸಬೇಕು. ಅವರು ಸರಿಮಾಡಿದರೆ ನಮ್ಮ ದೇಶದಲ್ಲೂ ಸರಿಹೋಗುತ್ತದೆ. ನಾನು ಇದನ್ನು ಜನಗಳಲ್ಲಿ ಗಾಬರಿ ಹುಟ್ಟಿಸಬೇಕು ಎಂದು ಇಲ್ಲಿ ಹೇಳುತ್ತಿಲ್ಲ. ಸರ್ವ ಪ್ರಯತ್ನ ಪಟ್ಟು ಎಲ್ಲ ಸರಕಾರಗಳವರೂ ಕೂಡ ಸಂಪಾದಿಸಲು ಪ್ರಯತ್ನ ಮಾಡುತ್ತಿದ್ದಾರೆ. ಆಂಧ್ರಕ್ಕೆ ಹಾಗೂ ಬೆಜವಾಡಕ್ಕೆ ಮಂತ್ರಿಗಳು ಏತಕ್ಕಾಗಿ ಹೋಗಿದ್ದರು ಎಂದು ಕೆಲವರು ಕೇಳಿದರು. ನನ್ನ ಕಷ್ಟ ಏನಿತ್ತು ಅವರಿಗೇನು ಗೊತ್ತಾಗುತ್ತದೆ. ನಾನು ಮದರಾಸಿಗೆ ಹೋಗಿ ಅಲ್ಲಿದ್ದ ಸ್ಟೀಮರಿನಿಂದ ಅಕ್ಕಿಯನ್ನು ಪಡೆದು ವ್ಯಾಗನ್ನುಗಳಲ್ಲಿ ತುಂಬಿ ರೈಲು ಮೂಲಕ ಕಳುಹಿಸಿದಾಗ ಅಲ್ಲಿಂದ ಹೊರಟ ವ್ಯಾಗನುಗಳೆಲ್ಲಾ ಜೋಲಾರಪೇಟೆ ಸ್ಟೇಷನ್ನಿನಲ್ಲಿ ನಿಂತುಹೋಗಿತ್ತು. ಆಗ ನಾನು ಅರ್ಧ ರಾತ್ರಿಯ ವೇಳೆಯಲ್ಲಿ ಹೋಗಿ ಜೋಲಾರಪೇಟೆ ಸ್ಟೇಷನ್ನು ಮಾಸ್ಟರನ್ನು ಎಬ್ಬಿಸಲು ಹೇಳಿ ಕಳುಹಿಸಿದರೆ ಅವರು ಈಗೇಕೆ ಬರಬೇಕು ನನ್ನಲ್ಲಿ ಮಂತ್ರಿಗಳಿಗೇನು ಕೆಲಸ ಎಂದು ಹೇಳಿಕಳುಹಿಸಿದರು. ಪುನಃ ಒತ್ತಾಯದಿಂದ ಅವರನ್ನು ಎಬ್ಬಿಸಿ ಅಕ್ಕಿ ತೊಂದರೆ ಬೆಂಗಳೂರು ನಗರದಲ್ಲಿ ಹೆಚ್ಚಾಗಿದೆ ಮತ್ತು ನಾಳೆಯಿಂದ ರೇಷನ್ನು ಜಾರಿಗೆ ತರಬೇಕೆಂದು ಇರುವುದರಿಂದ ಇಂತಹ ವ್ಯಾಗನುಗಳು ಅಲ್ಲಿಗೆ ಜರೂರು ಹೋಗಬೇಕೆಂದು ಅವರಿಗೆ ಹೇಳಿದ ಅವರು ಮದ್ರಾಸಿಗೆ ಪೋನುಮಾಡಿ ಅಲ್ಲಿಂದ ಅಪ್ಪಣೆ ಪಡೆದು ಇಲ್ಲಿಗೆ ಬರುವಂತೆ ಅನುಕೂಲ ಮಾಡಿಕೊಟ್ಟರು. ಹೀಗೆ ಅರ್ಧ ರಾತ್ರಿಯಲ್ಲಿ ನಿದ್ದೆ ಕೆಡಿಸಿಕೊಂಡು ಕಷ್ಟಪಟ್ಟುದರಿಂದ ಬೆಂಗಳೂರಿಗೆ ಆಗ ಅಕ್ಕಿ ಬರಲು ಸಹಾಯವಾಯಿತು. ಹೀಗೆ ಮಾಡಲು ಮಂತ್ರಿಗಳೇ ಹೋಗಬೇಕಾಗಿತ್ತೇ ? ಆದರೆ ಆಫೀಸರುಗಳಿಗೆ ಎಲ್ಲೆಲ್ಲಿ ಏನೇನು ಆಗುತ್ತಿದೆ ಎನ್ನುವುದನ್ನು ತಿಳಿದು ಮಾಡಬೇಕಾಗಿತ್ತು ಎಂದು ಹೇಳಬಹುದು. ಆದರೆ ಜರೂರು ವಿಷಯ ಎಂದು ನಾನೇ ಖುದ್ದಾಗಿ ಬೇರೆ ಬೇರೆ ಊರುಗಳಿಗೆ ಹೋಗಿ ವ್ಯಾಗನ್ನುಗಳು ಅಲ್ಲಿಂದ ಇಲ್ಲಿಗೆ ಹೊರಡುವಂತೆ ಮಾಡಿದ್ದಾಯಿತು. ಅಲ್ಲದೆ ಮದ್ರಾಸಿನಲ್ಲಿ ಸ್ಟೀಮರ್ ಬಳಿ ನಾನು ಕಾಯುತ್ತಾ ಕುಳಿತಿದ್ದೆ. ಏಕೆಂದರೆ ಸ್ಟೀಮರಿಂದ ಬರುವ ಅಕ್ಕಿಯನ್ನು ಕೇರಳದವರು ಮತ್ತು ಇನ್ನಿತರ ರಾಜ್ಯಗಳವರು ಪಡೆದುಕೊಂಡು ಹೊರಟು ಹೋಗುವುದಲ್ಲದ್ದರು. ಮೊದಲು ನಮಗೆ ಅಲಾಟು ಆಗಿದ್ದರೂ ಹೀಗಾಗುತ್ತಿತ್ತು. ಆದರೆ ಇದು ಹೇಗಿತ್ತು ಎಂದರೆ 'ಹುಚ್ಚುಮುಂಡೆ ಮದುವೆಯಲ್ಲಿ ಉಂಡವನೇ ಜಾಣ' ಎನ್ನುವಂತೆ ಸ್ಟೀಮರಿನಿಂದ ಅಕ್ಕಿ ಬಂದ ತಕ್ಷಣ ನಾವು ಪಡೆದು ಸಾಗಿಸಿಕೊಳ್ಳದೇ ಹೋಗಿದ್ದಿದ್ದರೆ ಮುಂದೆ ನಮಗೆ ಅಕ್ಕಿ ಸಿಗುವುದೇ ನಿಧಾನವಾಗುತ್ತಿತ್ತು. ಅದರಿಂದ ಸ್ಟೀಮರು ಬಳಿಯೇ ನಾನು ಕಾದುಕೊಂಡು ಇದ್ದು ಅದನ್ನು ಲಾರಿಗಳ ಮೂಲಕ ತರಲು ಪ್ರಯತ್ನ ಮಾಡಿದೆ. ಏಕೆಂದರೆ ನಮಗೆ ಅಕ್ಕಿ ಸಿಗುತ್ತದೆ ಎನ್ನುವ ಗ್ಯಾರಂಟಿಯೇ ಇರುತ್ತಿರಲಿಲ್ಲ. ಸಕ್ಕರೆ ವಿಷಯದಲ್ಲಿ ನಮಗೆ ಗ್ಯಾರಂಟಿ ಇದೆ. ಏಕೆಂದರೆ, ಕೇಂದ್ರ ಸರಕಾರದವರು ಪ್ರತಿ ತಿಂಗಳಿನಲ್ಲಿಯೂ ಕೂಡ ಸುಮಾರು 8,000 ಹಾಗೂ 8,500 ಟನ್ನುಗಳಷ್ಟು ಅಲಾಟುಮೆಂಟು ಕಳುಹಿಸುತ್ತಾರೆ. ಅದರಂತೆ ನಾವು ಕೂಡ ಎಲ್ಲ ಜಿಲ್ಲೆಗಳಿಗೂ ಇಷ್ಟು ಟನ್ನುಗಳು ಎಂದು ಹಂಚಿಬಿಡುತ್ತೇವೆ. ಅದರಂತೆ ಜನಕ್ಕೆ ಎಲ್ಲ ಕಡೆಗಳಲ್ಲಿಯೂ ಸಿಕ್ಕುತ್ತಿದೆ. ಅದರಿಂದ ಅಂತಹ ತೊಂದರೆಯೇನೂ ಆಗುತ್ತಿಲ್ಲ. ಆದರೆ ಈ ಅಕ್ಕಿ ವಿಚಾರದಲ್ಲಿ ಅಂತಹ ಯಾವ ಗ್ಯಾರಂಟಿ ಕೂಡ ಇಲ್ಲ. ಅನೇಕ ಸಾರಿ ಮದರಾಸಿನಿಂದ ಕೇರಳಕ್ಕೆ ಹೋಗಿದೆ, ಮಹಾರಾಷ್ಟ್ರಕ್ಕೆ ಹೋಗಿದೆ, ಯು. ಪಿ. ಗೆ ಹೋಗಿದೆ, ಹೀಗೆ ಡೈವರ್ಟು ಮಾಡುತ್ತಿರುವುದರಿಂದ ನಾವು ಇಲ್ಲಿಯೇ ಧಾನ್ಯಗಳು ಬರುತ್ತವೆ ಎಂದು ನಂಬಿ ಕುಳಿತುಕೊಳ್ಳುವ ಹಾಗಿಲ್ಲ. ಹೀಗಾಗಿಯೇ ಒಂದು ಸಾರಿ ಲಾರಿಯನ್ನು ಅವಡಿಗೆ ಕಳುಹಿಸಿದ್ದೆವು ಆಗ ಅದು ಖಾಲಿಯಾಗಿ ಬರಬೇಕಾಯಿತು. ಏಕೆಂದರೆ ಆಗ ಸೆಂಟ್ರಲ್ ಗೋಡೌನಿಗೆ ಬಂದ ಅಕ್ಕಿ ಹೊರಟುಹೋಗಿತ್ತು. ಆ ನಂತರದಲ್ಲಿ ಪುನಃ ಕೇಂದ್ರದವರು ಸ್ಟೀಮರ್ ಬಂತು ಎಂದು ಹೇಳಿ ಕಳುಹಿದರು. ಆಗ ಹೋಗಿ ಕಾಂಬೋಡಿಯ ಹಾಗೂ ಥೈಲೆಂಡು ಕಡೆಯ ಅಕ್ಕಿ ಬಂದುದನ್ನು ತಂದು ಇಲ್ಲಿ ಹಂಚಲಾಯಿತು. ಈ ರೀತಿಯಾದ ಕಷ್ಟಗಳು ಆಗ ಬಂದಿತ್ತು. ಇಂತಹ ಅವ್ಯವಸ್ಥೆಗಳೆಲ್ಲಾ ಮೂರು ನಾಲ್ಕು ತಿಂಗಳುಗಳ ಕಾಲ ಆದುದರಿಂದ ಜನಕ್ಕೆ ಸ್ವಲ್ಪ ತೊಂದರೆಯಾಯಿತು ಇಂತಹ ಪರಿಸ್ಥಿತಿಯಲ್ಲಿ ಆಗಸ್ಟು ತಿಂಗಳಿನಲ್ಲಿ ಅಕ್ಕಿಗಾಗಿ ಮ್ಯಾಕ್ಸಿಮಂ ಪ್ರೈಸು ನಿಗದಿ ಮಾಡಬೇಕೆಂದು ಕೇಂದ್ರದವರು ಸೂಚನೆ ಮಾಡಿದರು. ಅಷ್ಟರಲ್ಲಿ ಲೆವಿಯನ್ನು ತೆಗೆಯಬೇಕೆಂದು ನಾವು ಹೇಳಿದ್ದೆವು ಮತ್ತು ಅದನ್ನು ತೆಗೆದುಬಿಟ್ಟರು. ಆಗ ಬೆಂಗಳೂರಿನಲ್ಲಿ ಒಂದು ಕ್ವಿಂಟಾಲ್ ಅಕ್ಕಿಯನ್ನು 70 ರೂಪಾಯಿನಂತೆ ಮಾರುತ್ತಿದ್ದರು. ಬಹುಶಃ ಆ ಪರಿಸ್ಥಿತಿಯನ್ನು ಹಾಗೇ ಬಿಟ್ಟಿದ್ದರೆ ಸರಿಹೋಗುತ್ತಿತ್ತು. ಇದರ ಮೇಲೆ ಕೇಂದ್ರ ಸರಕಾರದವರು ಮ್ಯಾಕ್ಸಿಮಂ ಪ್ರೈಸನ್ನು ನಿಗದಿ ಮಾಡಬೇಕೆಂದು ಪುನಃ ಸೂಚನೆ ಕೊಟ್ಟರು. ನಾನು ಕೂಡ ಹಿಂದೆ ಕೇಂದ್ರದಲ್ಲಿ ರಫಿ ಅಹಮ್ಮದ್ ಕಿದ್ವಾಯಿರವರು ಆಹಾರಮಂತ್ರಿಗಳಾಗಿದ್ದಾಗ ಅವರ ಜೊತೆಯಲ್ಲಿ ಆಹಾರ ಶಾಖೆಯಲ್ಲಿ ಕೆಲಸ ಮಾಡಿದ್ದ ಅನುಭವವೂ ನನಗೆ ಇದ್ದುದರಿಂದ 1952 ನೇ ಇಸವಿಯಲ್ಲಿ ಕಂಟ್ರೋಲುಗಳ ನಿರ್ಬಂಧವನ್ನೆಲ್ಲಾ ತೆಗೆದು ಇದ್ದುದರಿಂದ ಎಲ್ಲವೂ ಸರಿಹೋಗಿತ್ತು. ಈಗ

ಹತ್ತು ವರ್ಷಗಳಿಂದಲೂ ಯಾವತ್ತೂ ಮ್ಯಾಕ್ಸಿಮಂ ಪ್ರೈಸನ್ನು ನಿಗದಿ ಮಾಡುವ ಗೋಜಿಗೆ ಹೋಗಿರಲಿಲ್ಲ. ಮತ್ತು ಯೋಚನೆ ಕೂಡ ಮಾಡಲಿಲ್ಲ. ಈಗ ಈ ರೀತಿ ಮ್ಯಾಕ್ಸಿಮಂ ದರ ನಿಗದಿ ಮಾಡಬೇಕೆಂದು ಹೇಳಿದಾಗ ನಮಗೆ ಬಫರ್ ಸ್ಟಾಕಿನಿಂದ ಸ್ವಲ್ಪ ಧಾನ್ಯಗಳನ್ನು ಕೊಡಿ ಎಂದು ಕೇಂದ್ರದವರನ್ನು ಕೇಳಿದೆವು. ಏಕೆಂದರೆ ಬೆಂಗಳೂರಿನಲ್ಲಿ ಕ್ವಿಂಟಾಲಿಗೆ 70 ರೂಪಾಯಿನಂತೆ ಮಾರುತ್ತಿರುವಾಗ ನಾವು ಹೊರಗಡೆಯಿಂದ ಬರುವ ಅಕ್ಕಿಗೆ ಬೆಲೆ ನಿಗದಿ ಮಾಡಿದರೆ ರೈತರಿಗೆ ತೊಂದರೆಯಾಗಬಹುದು ಮತ್ತು ಜನಕ್ಕೂ ನಾವು ಅಕ್ಕಿ ಸಿಗದೇ ಇದ್ದಾಗ ಒದಗಿಸಬೇಕಾಗುತ್ತದೆ. ಇದರಿಂದ ಸರಕಾರದಲ್ಲಿ ಸಾಕಷ್ಟು ದಾಸ್ತಾನು ಇಟ್ಟುಕೊಳ್ಳಬೇಕಾಗುತ್ತದೆ. The Government should have enough of stock with them to feed Bangalore at least for two to three months ಆದ್ದರಿಂದ ಬೆಲೆಯನ್ನು ಹೀಗೆ ನಿಗದಿ ಮಾಡಿದರೆ 70 ರಿಂದ 80 ರವರೆಗೆ ಹೋಗಬಹುದು ಎಂದು ನಾವು ನಿಗದಿ ಮಾಡಲಿಲ್ಲ. ಏಕೆಂದರೆ ಸೈನ್ಯಕ್ಕೆ ಹೋಗುವವನ ಕೈಯ್ಯಲ್ಲಿ ಬಂದೂಕನ್ನು ಕೊಟ್ಟು ಮದ್ದು ಗುಂಡು ಕೊಡದೇ ಹೋದರೆ ಅವನ್ನು ಸೈನ್ಯಕ್ಕೆ ಹೋಗಿ ಯುದ್ಧದಲ್ಲಿ ಹೇಗೆ ತಾನೇ ಹೋರಾಡಲು ಸಾಧ್ಯ ? ಈ ಪರಿಸ್ಥಿತಿಯಲ್ಲಿ ಮ್ಯಾಕ್ಸಿಮಂ ಪ್ರೈಸನ್ನು ಯಾವ ರೀತಿ ನಿಗದಿ ಮಾಡಿ ಜಾರಿಗೆ ತರಬೇಕು? The merchants knew how much stock we had and we do not know how much they have. ಆಗ ನಾವು ಕೇಂದ್ರಕ್ಕೆ ನಮ್ಮಲ್ಲಿ ಆಹಾರದ ದಾಸ್ತಾನು ಸರಿಯಾಗಿಲ್ಲ ಇದನ್ನು ಹೇಗೆ ಜಾರಿಗೆ ತರುವುದು ಎಂದು ಕೇಳಿದೆವು. ಅಲ್ಲದೆ ವರ್ತಕರುಗಳಿಗೆ ನಮ್ಮಲ್ಲಿರುವ ದಾಸ್ತಾನ ಏನು ಎನ್ನುವುದು ಗೊತ್ತು. ಆದರೆ ನಮಗೆ ವರ್ತಕರ ಕೈಯೊಳಗೆ ಎಷ್ಟು ದಾಸ್ತಾನಿದೆ ಎನ್ನುವುದು ನಮಗೆ ಗೊತ್ತಾಗುವುದಿಲ್ಲ. ಹೀಗಾಗಿ ಮ್ಯಾಕ್ಸಿಮಂ ಪ್ರೈಸ್ ಎಂದು ನಿಗದಿ ಮಾಡಿದ ಕೂಡಲೇ ಅಕ್ಕಿಯಲ್ಲಾ ಕಾಣದಂತೆ ಮಾಯವಾಯಿತು.

ಶ್ರೀ ಶಿದ್ದಯ್ಯ ಕಾಶೀಮಠ್ (ಕಿರಹಟ್ಟಿ).—ಅದನ್ನು ಪತ್ತೆ ಹಚ್ಚಬಹುದಿತ್ತು.

ಶ್ರೀ ಎಂ. ವಿ. ಕೃಷ್ಣಪ್ಪ.—ಪತ್ತೆ ಹಚ್ಚಲು ಹೊರಟರೆ ಅದರಿಂದ ಪೋಲೀಸರುಗಳು ಧಾಳಿಮಾಡಿದಾಗ ದೊಡ್ಡ ದಾಂಧಲಿಗಳೇ ಅದವು. ಹೀಗೆ ಅಕ್ಕಿ ಸ್ಕೇರ್ ಆಗಿ ಹೊರಟು ಹೋಯಿತು. ಪೋಸ್ಟು ಇದು ಕಾನ್‌ಸ್ಟಿಟ್ಯೂಷನಲ್ ಪೀರಿಯಡ್ಡು ಅಷ್ಟು ಸುಲಭವಲ್ಲ ಇದನ್ನೆಲ್ಲಾ ಮಾಡುವುದು. ಒಟ್ಟಿನಲ್ಲಿ ಆಂಧ್ರದಿಂದ ಬರುವ ಅಕ್ಕಿ ನಿಂತು ಹೋಯಿತು. ನಮಗೆ ಮೊದಲು ಆಂಧ್ರದ ಕಡೆಯಿಂದ ಒಂದು ತಿಂಗಳಿಗೆ ಸುಮಾರು ಬೆಂಗಳೂರಿಗೇನೆ 10 ಸಾವಿರದಿಂದ 15 ಸಾವಿರ ಟನ್ನುಗಳಷ್ಟು ಬರುತ್ತಿತ್ತು. ಇಷ್ಟು ಹೊತ್ತಿಗೆ ಸೆಪ್ಟಂಬರು ಹಾಗೂ ಆಕ್ಟೋಬರು ತಿಂಗಳು ಬಂತು ಇದರೊಳಗೆ ಸ್ವಲ್ಪ ಆಭಾವದ ಪರಿಸ್ಥಿತಿಯೂ ಹೆಚ್ಚಾಗಿದೆ ಎಂದು ನಾವು ಅಂಧ್ರಕ್ಕೆ ಅಕ್ಕಿಗಾಗಿ ಪತ್ರ ವ್ಯವಹಾರ ಮಾಡಿದೆವು. ಆದರೆ ಅವರು ಈಗ ಫ್ರೀ ಟ್ರೇಡ್ ಇಲ್ಲ ಅದರಿಂದಾಗಿ ಅಕ್ಕಿ ಕಳುಹಿಸುವುದಕ್ಕಾಗುವುದಿಲ್ಲ ಎಂದು ಹೇಳಿದರು, ಅಲ್ಲದೆ ಇಲ್ಲಿಗೆ ಮಾರಲು ಬೆಲೆ ಕೂಡ ಸರಿಯೂಗಿಲ್ಲ ಎಂದು ಹೇಳಿದರು. ನಮ್ಮಲ್ಲಿರುವ ವರ್ತಕರುಗಳೇ ಸುಮಾರು 2 ಲಕ್ಷ ಟನ್ನುಗಳಷ್ಟು ಅಕ್ಕಿಯನ್ನು ಅಂಧ್ರದ ಕಡೆಯಿಂದ ತರಿಸುತ್ತಿದ್ದರು. ಈಗ ಅಲ್ಲಿ ತೊಂದರೆಯಾಗಿದೆ ಅಲ್ಲಿಂದ ಬರುವ ಅಕ್ಕಿ ಕೂಡ ನಿಂತು ಹೋಯಿತು. ಅಲ್ಲದೆ ಈಗ ಅಕ್ಕಿಯನ್ನು ಕಳುಹಿಸಬೇಕಾದರೆ ಅದರ ಬೆಲೆ ತುಂಬಾ ಹೆಚ್ಚಾಗುತ್ತದೆ ಎಂದು ಅಲ್ಲಿಂದ ಮಾರಕೂಡದು ಎಂದು ನಿರ್ಬಂಧವು ಕೂಡ ಬಂತು. ನಮಗೆ ಅಂಧ್ರದ ಕಡೆಯಿಂದ ಬಂಗಾರ ತೀಗಲು, ಮೊಲಕಲಗಲು ಹಾಗೂ ಕೃಷ್ಣಾಕಾಂತಲು ಎನ್ನುವ ಮಾದರಿಯ ಅಕ್ಕಿ ವಿಶೇಷವಾಗಿ ಅಲ್ಲಿಂದ ಇಲ್ಲಿನ ವರ್ತಕರುಗಳು ತರಿಸಿಕೊಳ್ಳುತ್ತಿದ್ದರು. ಬೆಂಗಳೂರಿಗೆ ಈ ಮಾದರಿಯ ಅಕ್ಕಿ ವಿಶೇಷವಾಗಿ ಬರುತ್ತಿತ್ತು ನನಗೆ ತಿಳಿದಂತೆ ಸೆಪ್ಟೆಂಬರು ಹಾಗೂ ಅಕ್ಟೋಬರು ತಿಂಗಳುಗಳಲ್ಲಿ ಬೆಂಗಳೂರಿಗೆ ಸುಮಾರು 32 ಸಾವಿರ ಟನ್ನುಗಳಷ್ಟು ಅಕ್ಕಿ ಬಂದಿದೆ.

ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಮದರಾಸಿಗೆ ಮತ್ತು ಕೇರಳಕ್ಕೆ ಒಂದು ಟನ್ ಕೂಡ ಹೋಗಲಿಲ್ಲ. ಆದುದರಿಂದ ಮದರಾಸಿನಲ್ಲಿ ಅಕ್ಟೋಬರ್ ನವಂಬರ್‌ನಲ್ಲಿ ಜನರಿಗೆ ತಿನ್ನುವುದಕ್ಕೆ ಒಂದು ಅಗಳೂ ಇರಲಿಲ್ಲ. ಅದು ಸರ್ಪಲಸ್ ಪ್ರದೇಶ ಮತ್ತು ಅಲ್ಲಿ ಕೇಂದ್ರ ಸರಕಾರದ ಗೋಡೌನ್ ಕೂಡ ಇದೆ ಆದರೂ ಇಂತಹ ಗತಿಯಾಯಿತು. ಇಲ್ಲಿಗೆ ಬಂಗಾರತೀಗಲು ಅಕ್ಕಿ ಆಂಧ್ರದಿಂದ ನಮಗೆ ಬಾರದೆ ಹೋಗಿದ್ದರೆ ಇಲ್ಲಿ ಬಹಳ ಕಷ್ಟವಾಗುತ್ತಿತ್ತು. ಒಂದು ಕ್ವಿಂಟಾಲಿಗೆ 130 ಮತ್ತು 140 ರೂಪಾಯಿನಂತೆ ಇಲ್ಲಿ ಮಾರಾಟ ಮಾಡಿದರು ಎಂದು ಹೇಳಿದರು. ಈ ಅಕ್ಕಿಗೆ ಯಾವಾಗಲೂ ಹೆಚ್ಚು ಬೆಲೆ. ನಮಗೆ 32 ಸಾವಿರ ಟನ್ ಬಂದುಬಿಟ್ಟಿತು, ಏಕೆಂದರೆ ಕಂಟ್ರೋಲ್ ಮಾಡದೇ ಹಾಗೆಯೇ ಬಿಟ್ಟೆವು. ಜನರಿಗೆ ಗೊತ್ತಾಗಲೆಂದು ಪ್ರಕಟಣೆಮಾಡಿದೆವು. ಚೇಂಬರ್ ಆಫ್ ಕಾಮರ್ಸ್‌ನ ಪ್ರೆಸಿಡೆಂಟರು ಮೂರು ದಿವಸಗಳಿಗೆ ಆಗುವಷ್ಟು ಅಕ್ಕಿ ಕೂಡ ಇಲ್ಲವೆಂದು ಒಂದು ಪ್ರಕಟಣೆ ಮಾಡಿದರು, ಇದರಿಂದ ಬೆಂಗಳೂರಿನ ಜನರನ್ನು ಹೆದರಿಸಿದರು. ಕಂಟ್ರೋಲ್ಡ್ ಅಕ್ಕಿ

(ಶ್ರೀ ಎಂ. ವಿ. ಕೃಷ್ಣಪ್ಪ)

ಇಲ್ಲದಿದ್ದರೂ 32 ಸಾವಿರ ಟನ್ ಅಕ್ಕಿ ಇಲ್ಲಿಗೆ ಬರುತ್ತಿದೆ, ಎಂದು ಫೋಟೋ ಹಿಡಿಸಿ ಅದನ್ನು ಪ್ರಕಟ ಮಾಡಿದೆವು. ಜನರು ಗಾಬರಿ ಪಡಿದಿರಲೆಂದು ಹೀಗೆ ಮಾಡಿದೆವು. ಇದೇ ಎರಡು ತಿಂಗಳಲ್ಲಿ ಮದರಾಸಿಗೂ ಕೇರಳಕ್ಕೂ ಒಂದು ಕಾಳೂ ಹೋಗಲಿಲ್ಲ. ತಿಂಗಳಿಗೆ 60 ಸಾವಿರ ಟನ್ ಕೇರಳಕ್ಕೂ, 30 ಸಾವಿರ ಟನ್ ಮದರಾಸಿಗೂ, ಹೋಗಬೇಕಾಗಿತ್ತು. ಆವರೆ ನಮಗೆ ಎಂಟು ಸಾವಿರ ಬರುವುದಕ್ಕೆ ಹದಿನಾರು ಸಾವಿರ ಟನ್ ಬಂತು. ಇದಕ್ಕೆ ಕಾರಣವೇನೆಂದರೆ, ನಾವು ಕಂಟ್ರೋಲ್ ಮಾಡಲಿಲ್ಲ. ಯಾವಾಗಲೂ ಮಾರುವ ಬೆಲೆಗೇ ಬಂಗಾರು ತೀಗಲು ,ಮುಲುಕುಲುಕಲು ಅಕ್ಕಿಯನ್ನು ಮಾರಿದರು. ಜನರು ಬದುಕಲಿ ಎಂದು ಹೀಗೆ ಮಾಡಿದೆವೇ ವಿನಾ ವರ್ತಕರಿಗೆ ಅನುಕೂಲ ಮಾಡಬೇಕೆಂಬ ಉದ್ದೇಶದಿಂದಲ್ಲ. ಜನರಿಗೆ ಹೊಟ್ಟೆಗಿಲ್ಲದೆ ತೊಂದರೆಯಾಗದಿರಲೆಂದು ಮಾಡಿದೆವು.

